International Journal of Kannada Research 2021; 7(2): 38-46

International Journal of Kannada Research
www.kannadajournal.com

**ISSN: 2454–5813**
IJKR 2021; 7(2): 38-46
© 2021 IJKR
www.kannadajournal.com
Received: 22-02-2021
Accepted: 26-03-2021

**ವಿನಯ್ ಎಂ**
ಸಹಾಯಕ ಪ್ರಾಧ್ಯಾಪಕರು,
ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ, ದಾವಂಗೆರೆ ವಿಶ್ವವಿದ್ಯಾಲಯ, ದಾವಂಗೆರೆ, ಕರ್ನಾಟಕ, ಭಾರತ

**Corresponding Author:**
**ವಿನಯ್ ಎಂ**
ಸಹಾಯಕ ಪ್ರಾಧ್ಯಾಪಕರು,
ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ, ದಾವಂಗೆರೆ ವಿಶ್ವವಿದ್ಯಾಲಯ, ದಾವಂಗೆರೆ, ಕರ್ನಾಟಕ, ಭಾರತ

# ಮಾನವ ಹಕ್ಕುಗಳ ಸಂರಕ್ಷಣೆಯಲ್ಲಿ ಮಾಧ್ಯಮಗಳ ಪಾತ

**ವಿನಯ್ ಎಂ**

ಮನುಷ್ಯಕುಲದ ಎರಡು ಪ್ರಭೇದವನ್ನು ಕಾಲಗಳ ಹಿಂದೆಯೇ ನಮ್ಮ ವಚನಕಾರರು ಹೇಳಿರುವುದನ್ನು ನಾವು ಕಾಣಬಹುದು. ಅದರೊಳಗೆ ಬೇರೆ ತತ್ವ ಅಡಗಿದ್ದರೂ ಅದು ಗಂಡು ಮತ್ತು ಹೆಣ್ಣು ಎಂಬ ದೈಹಿಕ ಪರಿಕಲ್ಪನೆಯನ್ನು ಕಟ್ಟಿಕೊಟ್ಟಿದೆ. ಆದರೆ, ಆ ಎರಡೂ ದೈಹಿಕ ಲಕ್ಷಣಗಳನ್ನು ಮೇಳೈಸಿಕೊಂಡು ಸಮಾಜದಲ್ಲಿರುವ ವರ್ಗವೇ ತೃತೀಯಲಿಂಗಿಗಳು. ಈ ಸಮಾಜ ಮಂಗಳಮುಖಿ ಎಂದಾಕ್ಷಣ ನೋಡುವ ನೋಟವೇ ಬೇರೆ ರೀತಿಯಲ್ಲಿ ಇರುತ್ತದೆ. ನಾವು ಕೂಡ ರೈಲಿನಲ್ಲಿ ಅವರನ್ನು ಕಂಡಾಕ್ಷಣ ಯಾಕೆ ಹೀಗೆ ಅಸಹ್ಯವಾಗಿ ಚಪ್ಪಾಳೆ ತಟ್ಟಿಕೊಂಡು ಬೇಡಲು ಬರ್ತಾರಪ್ಪ? ಇವರಿಗೆ ದುಡಿದು ತಿನ್ನೋಕೆ ಆಗಲ್ವ ಅಂತ ಯೋಚಿಸಿರಬಹುದು. ದುರಾದೃಷ್ಟದ ಸಂಗತಿಯೆಂದರೆ ಅವರು ಕೂಡ ಪ್ರಕೃತಿಯ ಸೃಷ್ಟಿ ಎನ್ನೋದು ಮರೆತು ಕೀಳಾಗಿ ಈ ಸಮಾಜ ನಡೆಸಿಕೊಳ್ಳುವುದನ್ನು ನೋಡಿಯೂ ನೋಡದವರ ಹಾಗೆ ಸುಮ್ಮನಿದ್ದುಬಿಡುತ್ತೇವೆ. ಇಷ್ಟು ಪೀಠಿಕೆ ಯಾಕೆ ಅಂದ್ರೆ ಅವರಲ್ಲಿ ಕೂಡ ಅಂತಃಕರಣದ ಭಾವವಿದೆ. ನೋವು ನಲಿವು ಉಮ್ಮಾದದ ಘಳಿಗೆಯಿದೆ. ನಮ್ಮ ಕಣ್ಣೀರು ಅವರ ಸ್ಪಂದನೆಗೆ ಕಾಣಿಸುವುದಾದರೆ, ನಮಗ್ಯಾಕೆ ಅವರ ನೋವು ನಲಿವು ಕಾಣುವುದಿಲ್ಲ? ಅವರಲ್ಲೂ ಕೂಡ ಸಾಧಿಸಿದವರಿದ್ದಾರೆ, ಪ್ರೀತಿಕಾ ಎನ್ನುವ ಮಂಗಳಮುಖಿ ಮುಖ್ಯವಾಹಿನಿ ಭಾಗವಾಗಿ ಪೋಲೀಸ್ ಕೆಲಸ ನಿರ್ವಹಿಸುತ್ತಾ ಸಮಾಜಕ್ಕೆ ನೀತಿ ಪಾಠ ಹೇಳುತ್ತಿರುವುದು ಹೆಮ್ಮೆಯ ಸಂಗತಿ. ಹಾಗೂ ಇದೊಂದು ಪ್ರೋತ್ಸಾಹದಾಯಕ ಬೆಳವಣಿಗೆ ಸಹ ಆಗಿದೆ. ಹಿಂದೆಲ್ಲಾ ಮನೆಯ ಶುಭಕಾರ್ಯದಲ್ಲಿ ಮಂಗಳಮುಖಿಯರನ್ನು ಗೌರವಿಸಿ, ಅವರಿಂದ ಆಶೀರ್ವಾದ ಬೇಡುವ ಪದ್ಧತಿಯಿತ್ತು. ಅಂದರೆ ಸ್ತ್ರೀ ಪುರುಷ ಇಬ್ಬರೂ ಒಂದೇ ಜೀವದಲ್ಲಿ ಆವಿರ್ಭವಿಸಿದ ಶಿವನ ರೂಪವನ್ನು ಗೌರವಿಸುವ ವಾಡಿಕೆಯಿತ್ತು. ಇಂದು ಒಂದೊಂದೇ ಸಂಪ್ರದಾಯಗಳ ಕೊಂಡಿ ಕಳಚಿದೆ. ನಾವು ಕೂಡ ಅವರನ್ನು ಮುಖ್ಯವಾಹಿನಿಗೆ ಕರೆತರುವ ಪ್ರಾಮಾಣಿಕ ಪ್ರಯತ್ನ ಕೂಡ ಮಾಡುತ್ತಿಲ್ಲ. ಅವರಿಗೂ ಕೂಡ ನಮ್ಮಂತೆಯೇ ಬದುಕುವ ಹಕ್ಕಿದೆ. ವೃತ್ತಿ, ಭದ್ರತೆ, ಸಾಮಾಜಿಕ ನ್ಯಾಯದ ಅವಶ್ಯಕತೆಯಿದೆ. ಅವರ ಆರೋಗ್ಯದ ಸಮಸ್ಯೆಗೆ ಉಚಿತ ವೈದ್ಯಕೀಯ ಸೇವೆ ಒದಗಿಸುವ ಕಾಳಜಿವಹಿಸುವ ಅನಿವಾರ್ಯತೆಯಿದೆ. ಇಂದಿನ ಅವರ ಪರಿಸ್ಥಿತಿಗೆ ಅವರೇನು ಕಾರಣರಲ್ಲ. ಹುಟ್ಟಿನಿಂದ ಬಂದ ದೋಷವೆಂದು ಚಿಂತಿಸಿ ನಮ್ಮಂತೆಯೇ ಅವರೂ ಸಹ ಎಂಬ ಭಾವನೆಯಿಂದ ಸಮಾಜ ನೋಡಬೇಕಿದೆ. ನಾವು ಅವರ ಬಗ್ಗೆ ಚಿಂತಿಸಿದರೆ ಕರುಳು ಚುರುಕ್ ಎನ್ನುವುದ ಸಹಜ. ಏಕೆಂದರೆ, ಸ್ವಂತ ಮನೆಯವರೇ ಅವರನ್ನು ನಿರ್ಲಕ್ಷಿಸಿ ಮನೆಯಿಂದ ಹೊರದಬ್ಬಿರುತ್ತಾರೆ, ಅಪ್ಪ,ಅಮ್ಮ,ಅಣ್ಣ, ತಂಗಿ ನೆಂಟರು ಹುಟ್ಟಿದ ಊರನ್ನು ತೊರೆದು ಎಲ್ಲೋ ಹೇಗೋ ಅವರಂತೆಯೇ ನೊಂದು ನಿರ್ಲಕ್ಷಿತರಾದವರ ಜೊತೆಗೆ ಜೀವನ ಪೂರ್ತಿ ಹೋರಾಟದಲ್ಲಿಯೇ ಕಳೆಯುವ ಅವರ ದುಃಸ್ಥಿಗೆ ಈ ಸಮಾಜದ ಭಾಗವಾದ ನಾವು ಕೂಡ ಸ್ಪಂದಿಸುವ ಅವಶ್ಯಕತೆಯಿದೆ. ಅವರಿಗೂ ಕೂಡ ನಮ್ಮಂತೆಯೇ ಕುಟುಂಬ ಸಂಸಾರದ ಆಸೆ ಒಳಗೊಳಗೇ ಇದ್ದರೂ ಅದು ಮರೀಚಿಕೆಯಾಗಿದೆ. ಎಲ್ಲರೂ ಒಳ್ಳೆಯವರಲ್ಲ ಹಾಗೆಯೇ ಕೆಟ್ಟವರೂ ಅಲ್ಲ. ಅಂತೆಯೆ ಅವರ ಸಾಮಾಜಿಕ ಅಭಿವೃದ್ಧಿಯಲ್ಲಿ ಮಾಧ್ಯಮಗಳು ಪರಿಣಾಮಕಾರಿಯಗಿ ಕಾರ್ಯನಿರ್ವಹಿಸಬಲ್ಲವು ಎಂದೇ ಹೇಳಬಹುದು.

ಮಾಧ್ಯಮ ಎನ್ನುವುದು ಇಂದು ನಿನ್ನೆಯದಲ್ಲ, ಹಲವು ವರ್ಷಗಳ ಗತ ಇತಿಹಾಸದಿಂದ ಬೆಳೆದು ಇಂದು ಬೃಹದಾಕಾರದ ಹೆಮ್ಮರವಾಗಿದೆ, ಇಲ್ಲಿ ಹಗಳಿರುಳು ನಿದೆಗೆಟ್ಟ ತ್ಯಾಗಿಗಳ ಶ್ರಮವಿದೆ, ಬಡವರ, ನಿರ್ಗತಿಕರ ಧ್ವನಿಯಿದೆ, ನ್ಯಾಯಕ್ಕಾಗಿ ಪಣತೊಟ್ಟ ಅಪ್ರತಿಮ ಬರಹಗಾರರ ಅಕ್ಷರಗಳಿವೆ, ಆಂಗ್ಲರ ವಿರುದ್ಧ ಸಮರ ಸಾರಲು ಪತ್ರಿಕೋದ್ಯಮ ಹೆಗಲು ನೀಡಿದೆ. ಸಂಘ ಜೀವಿಯಾದ ಮಾನವನ ಪರಸ್ಪರ ಆಲೋಚನೆಗಳು ಮತ್ತು ಭಾವನೆಗಳ ವಿನಿಮಯಕ್ಕೆ ಸಂವಹನ ಅತೀ ಅವಶ್ಯ. ಸಂಪರ್ಕ ಇಲ್ಲದೆ ಮನುಷ್ಯ ಉಳಿಯಲಾರ.

ಹಸಿವು, ನೀರಡಿಕೆಗಳು ಹೇಗೆ ಮೂಲಭೂತ ಅಂಶಗಳೋ ಸಂವಹನವೂ ಸಹ ಮಾನವನ ಮೂಲಭೂತ ಅಗತ್ಯತೆ. ಮಾಧ್ಯಮವೆಂದರೆ ಅದೊಂದು ಸಬಲ ಸಂವಹನ ಶಕ್ತಿ. ತಲ-ತಲಾಂತರಗಳಿಂದ ಒಂದು ವಿಷಯವನ್ನು ಹಲವಾರು ಸಮುದಾಯಕ್ಕೆ ತಲುಪಿಸಲು ಪೂರಕವಾಗಿ ಬೆಳೆದುಬಂದಿದೆ. ಯಾವುದೇ ಪ್ರಚಲಿತ ವಿದ್ಯಮಾನಗಳು ಮಾನವ ಸಮುದಾಯಕ್ಕೆ ತಿಳಿಯಬೇಕೆಂದರೆ ಮಾಧ್ಯಮದ ಅನಿವಾರ್ಯತೆ ಇದೆ. ಇದು ಸಾರ್ವಕಾಲಿಕ ಸತ್ಯವೂ ಹೌದು. ಹೀಗೆ ಕಾಲದಿಂದ ಕಾಲಕ್ಕೆ ಸರಿ-ತಪ್ಪುಗಳ ತುಲನೆಯನ್ನು ಜನರ ಮುಂದಿಡುವ ಮಾಧ್ಯಮದಲ್ಲಿ ಹಲವು ಪ್ರಕಾರಗಳಿವೆ. ಮುದ್ರಣ ಮಾಧ್ಯಮ, ವಿದ್ಯುನ್ಮಾನ ಮಾಧ್ಯಮ ಹಾಗೂ ಸಿನಿಮಾ ಮಾಧ್ಯಮ.

ಪ್ರತಿ ಮಾಧ್ಯಮವು ತನ್ನ ವ್ಯಾಪ್ತಿಯಲ್ಲಿ ಜನರೊಂದಿಗೆ ಸಂಪರ್ಕ ಸಾಧಿಸುತ್ತಾ ಒಂದು ವಿಷಯ, ಮಾಹಿತಿ ಅಥವಾ ಸಂದೇಶವನ್ನು ರವಾನೆ ಮಾಡುತ್ತಿರುತ್ತದೆ. ಇಂತಹ ಸಂದರ್ಭದಲ್ಲಿ ಒಂದು ಧನಾತ್ಮಕವಾದ, ಸಮಾಜಮುಖಿಯಾದ ಜವಾಬ್ದಾರಿ ಪ್ರತಿ ಮಾಧ್ಯಮದ ಮೇಲಿರುತ್ತದೆ. ಈ ಹಿನ್ನಲೆಯಲ್ಲಿ ಸಮಾಜದ ಹಲವಾರು ಪರಿಕಲ್ಪನೆಗಳ ಮೇಲೆ ಬೆಳಕು ಚೆಲ್ಲುವುದೂ ಅವುಗಳ ಆದ್ಯ ಕರ್ತವ್ಯ. ತುಳಿತಕ್ಕೆ ಒಳಗಾದ ಸಮುದಾಯವನ್ನು ಗುರುತಿಸಿ ಅವರನ್ನು ಮುಖ್ಯವಾಹಿನಿಗೆ ತರುವುದು, ಅವರ ಬದುಕನ್ನು ಸುಧಾರಿಸುವುದು ಮಾಧ್ಯಮಗಳ ಪ್ರಮುಖ ಕೆಲಸ. ಈ ದೆಸೆಯಲ್ಲಿ ನಮ್ಮ ಸಮಾಜದಲ್ಲಿ ನಿರ್ಲಕ್ಷ್ಯಕ್ಕೊಳಗಾದ ಸಮುದಾಯಗಳ ಪೈಕಿ ಮಂಗಳಮುಖಿಯರೂ ಕೂಡ ಅಗ್ರ ಸ್ಥಾನದಲ್ಲಿ ನಿಲ್ಲುತ್ತಾರೆ.

ಮನುಷ್ಯ ಕುಲ ಅಸ್ತಿತ್ವದಲ್ಲಿರುವಾಗ ಅದು ತನ್ನದೇ ಗುಣ-ಲಕ್ಷಣ, ರೂಪು, ಹಾವ-ಭಾವ, ವ್ಯಕ್ತಿತ್ವದಿಂದ ಸಮಾಜಕ್ಕೆ ಪರಿಚಿತವಾಗಲು ಹಾತೊರೆಯುತ್ತದೆ ಮತ್ತು ಅದು ಮಾನವ ಸಹಜವಾದ ಇಂಗಿತವೂ ಹೌದು. ಒಬ್ಬ ಮನುಷ್ಯ ತಾನು ಹುಟ್ಟಿದಾಗಿನಿಂದ ಸಾಯುವವರೆಗೆ ತನ್ನ ಜೀವನದ ಪ್ರತಿ ಹಂತದಲ್ಲಿಯೂ ತನ್ನನ್ನು ತಾನು ನಿರ್ದಿಷ್ಟವಾಗಿ ಇಂತಹ ಗುಂಪಿಗೆ, ವರ್ಗಕ್ಕೆ, ಹವ್ಯಾಸಕ್ಕೆ, ದುಡಿತಕ್ಕೆ ಸೇರಿದವನು ಎಂದು ಗುರುತಿಸಲ್ಪಡುತ್ತಾನೆ. ಹೇಗೆ ಹವ್ಯಾಸಗಳು ಆತನ ಮನಸ್ಥಿತಿಗೆ ತಕ್ಕ ಹಾಗೆ ರೂಪು ಪಡೆಯುತ್ತದೆಯೋ ಹಾಗೆ ದೈಹಿಕ ಬೆಳವಣಿಗೆ. ಆಕಾರ, ರೂಪು, ಆರೋಗ್ಯ ಎಲ್ಲವೂ ವಿಜ್ಞಾನ ಲೋಕದ ತಳಹದಿಯ ಮೇಲೆ ಸಾಕ್ಷಿಸಮೇತ ಕಣ್ಣಿಗೆ ಕಾಣುವಂತಹ ಅಂಶಗಳಾಗಿವೆ.

ಮೊದಲಿನಿಂದಲೂ ನಾವು ಸಮಾಜದಲ್ಲಿ ಗಂಡು ಮತ್ತು ಹೆಣ್ಣು ಎಂಬ ಎರಡು ವರ್ಗಗಳನ್ನು ಕಂಡುಕೊಂಡು ಅವುಗಳನ್ನು ದೈಹಿಕ ಗುಣಲಕ್ಷಣಗಳ ಆಧಾರದ ಮೇಲೆ ವ್ಯತ್ಯಾಸ ಗುರುತಿಸಿ ವಿಭಾಗಿಸಿದ್ದೇವೆ. ಈ ಗುಣಲಕ್ಷಣಗಳ ಆಧಾರದ ಮೇಲೆ ಆತನ ಅಥವಾ ಆಕೆಯ ಮನಸ್ಥಿತಿ ಮತ್ತು ಸಾಮರ್ಥ್ಯಗಳು ಕೊಂಚ ಅವಲಂಬಿತವಾಗಿರುತ್ತವೆ. ಗಂಡು ಎಂದರೆ ದೈಹಿಕವಾಗಿ ಸ್ತ್ರೀಗಿಂತ ಸ್ವಲ್ಪ ಸದೃಢವಾಗಿರುತ್ತಾನೆ ಎಂದು ನಂಬಿದ್ದೇವೆ. ಹಾಗಂತ ಎಲ್ಲ ಗಂಡಸರೂ ಸದೃಢ ಕಾಯರು, ಎಲ್ಲ ಹೆಂಗಸರೂ ಕಡಿಮೆ ದೈಹಿಕ ಸಾಮರ್ಥ್ಯವುಳ್ಳವರು ಎಂದು ಸಾರಸಗಟಾಗಿ ಪರಿಗಣಿಸಲಾಗುವುದಿಲ್ಲ.

ಅದೇನೇ ಇರಲಿ, ಇಂತಹ ಒಂದು ಸಾಮಾಜಿಕ ವ್ಯವಸ್ಥೆಯೊಳಗೆ ಗಂಡು ಹೆಣ್ಣನ್ನು ಹೊರತುಪಡಿಸಿ ಇನ್ನೊಂದು ಪಂಗಡ, ವರ್ಗ ತಲೆಯೆತ್ತಿದೆ. ದೇಹದಲ್ಲಾಗುವ ಹಲವಾರು ಜೈವಿಕ ಏರಿಳಿತ, ಬದಲಾವಣೆಗಳ ಫಲವಾಗಿ ಗಂಡಾಗಿ ಹುಟ್ಟಿ ನಂತರ ಹೆಣ್ಣಾಗಿ ಬೆಳೆಯುವ ಅಥವಾ ಹೆಣ್ಣಾಗಿ ಹುಟ್ಟಿ ನಂತರ ಗಂಡಾಗಿ ಬೆಳೆಯುವ ಪ್ರಕಿಯೆ ನಡೆಯುತ್ತದೆ. ಹೀಗೆ ಗಂಡು ಮತ್ತು ಹೆಣ್ಣು ಇಬ್ಬರ ಸಮ್ಮಿಲನದ ರೂಪವಾದ ಇವರನ್ನು ಹಿಜಿರಾ, ಹಿಜಿಡಾ, ಮಂಗಳಮುಖಿ ಎಂತಲೂ ಕರೆಯುತ್ತೇವೆ. ಇವರೂ ಸಹ ನಮ್ಮ ಸಮಾಜದ ಅವಿಭಾಜ್ಯ ಅಂಗವಾಗಿದ್ದಾರೆ. ಆದರೆ, ದುರಾದೃಷ್ಟಾವಶಾತ್ ಸಮಾಜವು ಬೇರೆ ವರ್ಗಗಳನ್ನು ಒಪ್ಪಿಕೊಂಡಂತೆ ಇವರನ್ನು ಒಪ್ಪಿಕೊಳ್ಳಲು ಹಿಂದೇಟು ಹಾಕುತ್ತಿದೆ. ಇವರನ್ನು ಮನುಷ್ಯರಂತೆ ಕಾಣಲು ಮೀನ ಮೇಷ ಎಣಿಸುತ್ತಿದೆ. ಅವರ ಆ ಪರಿಸ್ಥಿತಿಗೆ ವೈಜ್ಞಾನಿಕ ಲೋಕವು ಕಾರಣ ಕೊಟ್ಟರೂ ಜನರ ಮನಸ್ಥಿತಿ ಇನ್ನೂ ಬದಲಾಗಿಲ್ಲ. ಅವರದಲ್ಲದ ಅನಿವಾರ್ಯ ಕಾರಣಕ್ಕಾಗಿ ಮಂಗಳಮುಖಿಯರು ಶೋಷಣೆಗೆ ಒಳಗಾಗುತ್ತಾರೆ, ಬಹುತೇಕ ಸಂದರ್ಭದಲ್ಲಿ ದೈಹಿಕ ಹಲ್ಲೆಗೊಳಗಾಗುತ್ತಾರೆ. ಒತ್ತಡದ ಪರಿಣಾಮವಾಗಿ, ಕೆಲವೊಮ್ಮೆ ಅವರೇ ಅಂಕೆ ಮೀರಿ ವರ್ತಿಸಿ ಸಮಾಜದ ಕೆಂಗಣ್ಣಿಗೆ ಗುರಿಯಾಗುತ್ತಾರೆ. ಹೀಗೆ ಹಲವು ವೈರುದ್ಧ್ಯಗಳ ನಡುವೆ ಅವರು ನಮ್ಮೊಟ್ಟಿಗೆ ಬದುಕುತ್ತಿದ್ದಾರೆ ಎನ್ನುವುದು ನಿಜ..ಆದರೆ, ನಿಜವಾಗಲೂ ಅವರು ನಮ್ಮೊಟ್ಟಿಗೆ ಬೆಳೆಯುತ್ತಿದ್ದಾರಾ..? ಅದು ಪ್ರಶ್ನೆ..!!

ಹಾಗಾದರೆ, ಮಾಧ್ಯಮವು ಹೇಗೆ ಸಮಾಜದ ತಾತ್ಸಾರಕ್ಕೆ ಒಳಗಾದವರ ಸಾಮಾಜಿಕ ಅಭಿವೃದ್ಧಿಗೆ ಏನು ಮಾಡುತ್ತಿದೆ? ಏನು ಮಾಡಬಹುದು? ಎಂದು ವಿಶ್ಲೇಷಿಸಿದರೆ ಅಷ್ಟರಮಟ್ಟಿಗೆ ಒಂದು ಸಮುದಾಯವನ್ನು ಮೇಲೆತ್ತುವ ಕೆಲಸ ಆರಂಭವಾಗುತ್ತದೆ. ಇದಕ್ಕೆ ಮಾಧ್ಯಮದ ಆಸರೆ ಏಕೆ ಬೇಕು ಎಂಬುದಕ್ಕೆ ಹಲವು ಕಾರಣಗಳನ್ನು ನಾವು ನೀಡಬಹುದು. ಮತ್ತು ಅದು ನಮ್ಮ ಕರ್ತವ್ಯವೂ ಹೌದು. ಪತ್ರಿಕೆಗಳನ್ನು ಜನ ಓದುತ್ತಾರೆ, ದೂರದರ್ಶನ ಇಂದು ಜನಜೀವನದಲ್ಲಿ ಹಾಸುಹೊಕ್ಕಾಗಿದೆ, ಸಿನಿಮಾ ಮಾಧ್ಯಮ ಇನ್ನಿಲ್ಲದಂತೆ ಪ್ರಬಲವಾಗಿ ಬೆಳೆದಿದೆ. ಈ ಮೂರೂ ಕಾರಣಗಳನ್ನಿಟ್ಟುಕೊಂಡು ನಾವು ಮಂಗಳ ಮುಖಿಯರ ಬಗ್ಗೆ ಜನರಲ್ಲಿರುವ ತಪ್ಪು ಅಭಿಪ್ರಾಯವನ್ನು ಬದಲಾಯಿಸಬಹುದು, ಅವರೂ ಸಾಮಾನ್ಯ ಮನುಷ್ಯನಂತೆ ಬದುಕಲು ದಾರಿ ಮಾಡಬಹುದು, ಸಮಾಜದಲ್ಲಿ ಮರ್ಯಾದೆಯುತವಾದ ಜೀವನ ನಡೆಸಲು ಸಾಥ್ ನೀಡಬಹುದು. ಇದರ ಮೂಲಕ ಮಾಧ್ಯಮವು ಅವರ ಜೀವನದಲ್ಲಿ ಧನಾತ್ಮಕವಾದ ಪ್ರಭಾವವನ್ನು ಬೀರಿ ತನ್ನ ಆದ್ಯ ಕರ್ತವ್ಯವನ್ನು ನಿಭಾಯಿಸಬಹುದು.

**ಉದ್ದೇಶಗಳು :**

- ಮಂಗಳಮುಖಿಯರ ಸಾಮಾಜಿಕ ಬದುಕಿನಲ್ಲಿ ಮಾಧ್ಯಮದ ಪಾತ್ರ.
- ಮಾಧ್ಯಮಗಳಲ್ಲಿ ಮಂಗಳಮುಖಿಯರನ್ನು ತೋರಿಸಿರುವ ರೀತಿ
- ಮಂಗಳಮುಖಿಯರ ವೈಯಕ್ತಿಕ ಅಭಿವೃದ್ಧಿಯಲ್ಲಿ ಮಾಧ್ಯಮದ ಪಾತ್ರ
- ಮಂಗಳಮುಖಿಯರ ಆರ್ಥಿಕ ಮತ್ತು ಶೈಕ್ಷಣಿಕ ಅಭಿವೃದ್ಧಿಯಲ್ಲಿ ಮಾಧ್ಯಮದ ಪಾತ್ರ.

**ಸಂಶೋಧನಾ ವಿಧಾನ:**

ಪ್ರಸ್ತುತ ದಿನಮಾನದಲ್ಲಿ ಮಂಗಳಮುಖಿಯರನ್ನು ಸಮಾಜದ ಮುಖ್ಯವಾಹಿನಿಗೆ ತರಲು ಮಾಧ್ಯಮಗಳು ಬೇಕೇಬೇಕು. ಒಂದು ಸಂಶೋಧನೆ ಯಶಸ್ವಿಯಾಗಿ ನಡೆಯಬೇಕಾದರೆ, ಆ ಸಂಶೋಧನೆಯಲ್ಲಿ ಸಮೀಕ್ಷೆ ಅಥವಾ ವಿಶ್ಲೇಷಣೆ ಬಹು ಮುಖ್ಯ ಪಾತ್ರವಹಿಸುತ್ತದೆ. ಯಾವುದೇ ಒಂದು ವಿಷಯ ವಸ್ತುವಿನ ಮೇಲೆ ಸಂಶೋಧನೆಯನ್ನು ತಮ್ಮ ಇಚ್ಛಾನುಸಾರವಾಗಿ ನಡೆಸಬಾರದು, ಸಂಶೋಧನೆಗೆ ತನ್ನದೇ ಆದ ರೀತಿ-ನೀತಿ ಚೌಕಟ್ಟುಗಳಿವೆ. ಈ ಚೌಕಟ್ಟಿನಲ್ಲಿಯೇ ನಡೆಯುವುದು ಸಂಶೋಧಕನ ಕರ್ತವ್ಯ.

**ಅಧ್ಯಯನದ ಮಹತ್ವ :** ಮಾನವ ತಾನು ಹುಟ್ಟಿದಾಗಿನಿಂದಲೂ

ಪ್ರತಿಯೊಂದು ಹಂತದಲ್ಲಿಯೂ ತನ್ನದೇ ಆದ ವಿಭಿನ್ನ ಮತ್ತು ವಿಶಿಷ್ಟ ನಡವಳಿಕೆಗಳಿಂದ ಗುರುತಿಸಿಕೊಂಡವನು, ಮಾನವ ಜೀವಿ ಭೂಮಿ ಮೇಲೆ ಜನಿಸಿದ ಕ್ಷಣದಿಂದ ಇಂದಿನ 21 ಶತಮಾನದವರೆಗೂ ಹಲವಾರು ಕ್ಷೇತ್ರಗಳಲ್ಲಿ ತನ್ನ ಅಭಿವೃದ್ಧಿಯನ್ನು ಕಂಡುಕೊಂಡಿದ್ದಾನೆ, ಅವನ ಜೊತೆ ಪ್ರಕೃತಿಯು ಸಹ ಶತಮಾನಗಳಿಂದ ಅವನಿಗೆ ಬೆನ್ನೆಲುಬಾಗಿ ನಿಂತಿದೆ. ಮಾನವ ಹೀಗೆ ಬೆಳೆಯುತ್ತಾ ಹೋದಂತೆ ತನ್ನ ಬೆಳವಣಿಗೆಯ ಸ್ವಾರ್ಥಕ್ಕಾಗಿ ಪ್ರಕೃತಿಯ ಹಲವಾರು ನಿಯಮಗಳನ್ನ ಮುರಿದು ಅವುಗಳನ್ನ ಪ್ರಶ್ನೆ ಮಾಡಿ ತನ್ನದೇ ಬದುಕಿಗೆ ಅಂತ್ಯದ ಮುನ್ನುಡಿಯನ್ನು ಬರೆಯಲು ಪ್ರಾರಂಭಿಸಿದ್ದಾನೆ. ಮಾನವ ತನಗೆ ಬೇಕಾದ ಹಾಗೆ ಸಮಾಜದ ಪರಿಕಲ್ಪನೆಯನ್ನು ಕಟ್ಟಿಕೊಂಡಾಗಲೂ ಅವನೇ ಕೆಲವೊಂದಿಷ್ಟು ಸಾಮಾಜಿಕ ಪಿಡುಗುಗಳಿಗೂ ಸಹ ದಾರಿ ಮಾಡಿಕೊಡುತ್ತಲೇ ಬಂದ. ಜಾತೀಯತೆ, ಅಸ್ಪೃಶ್ಯತೆ, ಅಸಮಾನತೆ, ಲೈಂಗಿಕ ಶೋಷಣೆ, ವರ್ಣಬೇಧ ಈ ರೀತಿಯ ಹಲವಾರು ಸಾಮಾಜಿಕ ಸಮಸ್ಯೆಗಳನ್ನು ತಾನೇ ಸೃಷ್ಟಿಸಿಕೊಂಡು ನಂತರದಲ್ಲಿ ಅವುಗಳ ಪರಿಹಾರಕ್ಕೂ ತಾನೇ ನಿಯಮಗಳನ್ನ ಮಾಡಿಕೊಳ್ಳತೊಡಗಿದ. ಪ್ರಕೃತಿಯಲ್ಲಿರು ಕೋಟ್ಯಾಂತ ಜೀವ ಸಂಕುಲಗಳಿಗೆ ಇಲ್ಲದಂತಹ ಭೇಧ ಭಾವದ ಸಮಸ್ಯೆಗಳನ್ನ ತಾನು ಸೃಷ್ಟಿಸಿಕೊಂಡ ಅವುಗಳಲ್ಲಿ ಹಲವಾರು ಸಮಸ್ಯೆಗಳು ಇಂದಿಗೂ ಜೀವಂತವಾಗಿವೆ. ಅವುಗಳಲ್ಲಿ ಪ್ರಮುಖವಾದಂತಹ ಒಂದು ಸಮಸ್ಯೆ ಈ ಮಂಗಳಮುಖಿಯರು. ಇವರನ್ನ ಟ್ರಾನ್ಸ್‌ಜೆಂಡರ್ ತೃತೀಯ ಲಿಂಗಿಗಳು ಎಂದು ಕರೆಯುತ್ತಾರೆ. ಇವರು ಬೇರೆ ಯಾವುದೋ ಪ್ರಾಣಿ ಸಂಕುಲಕ್ಕೆ ಸೇರಿದವರಲ್ಲ ಇವರು ಕೂಡ ಮನುಷ್ಯರೇ. ಇವರ ದೈಹಿಕ ರಚನೆಯಲ್ಲಿ ಹೆಣ್ಣು ಮತ್ತು ಗಂಡು ಎರಡನ್ನು ಹೋಲುವ ಲಕ್ಷಣಗಳು ಇರುತ್ತವೆ. ಇದು ಅವರಿಗೆ ಪ್ರಾಕೃತಿಕವಾಗಿ ಬಂದಿರುತ್ತದೆ. ಆದರೆ ಮಾನವ ಇವರನ್ನ ತನ್ನವರು ಎಂದು ಒಪ್ಪಿಕೊಳ್ಳುವುದಕ್ಕೆ ಶತಮಾನಗಳ ಕಾಲ ಯೋಚನೆ ಮಾಡಿದ, ಹೀಗಿರುವಾಗ ಇವರನ್ನ ಮಾತನಾಡಿಸುವುದು, ಮುಟ್ಟುವುದು ಇವರ ಜೊತೆಗೆ ಬದುಕುವುದಕ್ಕೆ ಹಿಂದೇಟು ಹಾಕಿದ. ಈ ಕಾರಣಗಳಿಗೆ ಇದನ್ನು ಸಾಮಾಜಿಕ ಪಿಡುಗು ಎಂದು ಗುರುತಿಸಿದ. ಆದರೆ ಮಂಗಳಮುಖಿಯರು ಸಹ ಮಾನವರೇ ಆಗಿರುವುದರಿಂದ ಅವರಿಗೂ ಸಹ ಬದುಕುವ ಸಮಾನವಾದ ಹಕ್ಕಿದೆ "ಭಾರತ ಸರ್ವಧರ್ಮದ ಶಾಂತಿಯ ತೋಟ" ಭಾರತದ ಸಂವಿಧಾನದಲ್ಲಿಯೂ ಇವರಿಗೆ ಸಮಾನವಾದ ಹಕ್ಕನ್ನು ನೀಡಲಾಗಿದೆ. ಆದರೆ ಸಮಾಜ ಇಂದಿಗೂ ಇವರನ್ನ ದೂರವಿಟ್ಟೇ ನೋಡುತ್ತದೆ. ಹೀಗಿರುವಾಗ ಇವರ ಸಾಮಾಜಿಕ ಸ್ಥಿತಿಗತಿಗಳು, ಅವರ ಜೀವನಪೋಯ, ಅವರ ಆರ್ಥಿಕ ಪರಿಸ್ಥಿತಿ ಟ್ರಾನ್ಸ್‌ಜೆಂಡರ್ ಮತ್ತು ಅಂತರ್ಲಿಂಗೀಯ ಸಮುದಾಯದ ಸದಸ್ಯರಿಗೆ ಪೌರತ್ವಕ್ಕೆ ಸಂಬಂಧಿಸಿದಂತೆ ಸಮೃದ್ಧ ಹಕ್ಕುಗಳಾದ ಸದಸ್ಯರಿಗೆ ಪೌರತ್ವಕ್ಕೆ ಸಮಬಂಧಿಸಿದಂತೆ ಸಮೃದ್ಧ ಹಕ್ಕುಗಳಾದ ಸ್ವಯಂ ಗುರುತಿಸುವಿಕೆ, ಸೌಲಭ್ಯಗಳ ಪಡೆಯುವಿಕೆ, ಶಿಕ್ಷಣ ಮತ್ತು ಉದ್ಯೋಗದ ಹಕ್ಕು ಮತ್ತು ಇತರ ಹಕ್ಕುಗಳನ್ನು ಸಮುದಾಯದವರನ್ನು ಒಂದೆಡೆ ಒಗ್ಗೂಡಿಸಿ ಅರಿವು ಮೂಡಿಸಬೇಕಿದೆ. ಅಂತೆಯೇ ಇವುಗಳಿಗೆ ಸಂಬಂಧಿಸಿದಂತೆ ಹಲವಾರು ಪ್ರಶ್ನೆಗಳು ಮೂಡುತ್ತವೆ ಹಾಗೂ ಈ ಮಂಗಳಮುಖಿಯರ ವಿಷಯಕ್ಕೆ ಸಂಬಂಧಿಸಿದಂತೆ ಸಮಾಜದ ನಾಲ್ಕನೇ ಅಂಗವಾದ ಮಾಧ್ಯಮ ಯಾವ ರೀತಿ ಜವಾಬ್ದಾರಿಯುತವಾಗಿ ನಡೆದುಕೊಳ್ಳುತ್ತಿದೆ ಹಾಗೂ ಮಾಧ್ಯಮದ ಪ್ರಭಾವದಿಂದ ಮಂಗಳಮುಖಿಯರ ಬದುಕಿನಲ್ಲಿ ಉಂಟಾದ ಬದಲಾವಣೆಗಳನ್ನು ತಿಳಿದುಕೊಳ್ಳವಲ್ಲಿ ಈ ಅಧ್ಯಯನ ಮಹತ್ವದ್ದಾಗಿದೆ.

**ಸಮಸ್ಯೆಯ ವ್ಯಾಖ್ಯಾನ:** ಮಂಗಳಮುಖಿಯರ ಸಾಮಾಜಿಯ ಅಭಿವೃದ್ಧಿಯಲ್ಲಿ ನಿಜಕ್ಕೂ ಮಾಧ್ಯಮಗಳು ಪ್ರಭಾವ ಬೀರುತ್ತಿವೆಯೆ?

**ಅಧ್ಯಯನದ ವ್ಯಾಪ್ತಿ:** ಮಂಗಳಮುಖಿಯರ ಕುರಿತಾದ ಈ ಸಂಶೋಧನೆಯು ತನ್ನದೇ ಆದ ನಿರ್ಧಿಷ್ಟ ವ್ಯಾಪ್ತಿಯನ್ನು ಹೊಂದಿಲ್ಲ, ಏಕೆಂದರೆ, ಪ್ರಪಂಚದಾದ್ಯಂತ ಇವರು ಎಲ್ಲೆಡೆಯೂ ನಮಗೆ ಕಾಣಸಿಗುತ್ತಾರೆ, ಅದಾಗ್ಯೂ ನಿರ್ಧಿಷ್ಟವಾಗಿ ಒಂದು ಸ್ಥಳದ ಚೌಕಟ್ಟಿನಲ್ಲಿ ನಾವು ನಮೂನೆಯ ಆಧಾರದ ಮೇಲೆ ಕೆಲವು ಮಂಗಳಮುಖಿಯರನ್ನು ಪರಿಗಣಿಸಿ ಅವರ ಜೀವನ ಶೈಲಿ, ಸಮಸ್ಯೆಗಳು, ಆರ್ಥಿಕ ಸಂಕಷ್ಟಗಳು, ಸಾಮಾಜಿಕ ಸ್ಥಿತಿಗತಿ, ಬದುಕು, ಕುಟುಂಬ, ವಿವಾಹ, ಸಂವಿಧಾನದ ಹಕ್ಕುಗಳು, ದಿನನಿತ್ಯದ ಸಮಸ್ಯೆಗಳು ಹೀಗೆ ಪುಂಕಾನುಪುಂಕವಾಗಿ ಚರ್ಚೆ ಮಾಡಬಹುದು. ಮಂಗಳಮುಖಿಯರ ಸಾಮಾಜಿಕ ಜೀವನದ ಮೇಲೆ ಮಾಧ್ಯಮಗಳ ಪಾತ್ರ ಎಂಬ ವಿಷಯವನ್ನು ಆಯ್ಕೆ ಮಾಡಿಕೊಳ್ಳಲಾಗಿರುವುದರಿಂದ ಅವರ ದಿನನಿತ್ಯದ ಜೀವನದಲ್ಲಿ ಮಾಧ್ಯಮಗಳಿಂದ ಏನಾದರೂ ಧನಾತ್ಮಕವಾದ ಪರಿಣಾಮ ಉಂಟಾಗಿದೆಯೇ ಎಂಬುದು ನಮ್ಮ ಮುಖ್ಯ ಉದ್ದೇಶ, ಪ್ರತಿದಿನದ ಜೀವನ ನಡೆಸುವಲ್ಲಿ ಪತ್ರಿಕೆಗಳಲ್ಲಿ ಪ್ರಕಟವಾದ ಯಾವುದಾದರೂ ಲೇಖನಗಳಿಂದ ಜನರು ಬದಲಾಗಿ ಅವರು ಮಂಗಳಮುಖಿಯರನ್ನು ನೋಡುವ ದೃಷ್ಟಕೋನವು ಬದಲಾಗಿದೆಯೇ ಎಂಬುದೇ ಇದರ ಮೂಲ ಉದ್ಧೇಶ.

**ಅಧ್ಯಯನ ವಿಧಾನ:** ಮಂಗಳಮುಖಿಯರ ಕುರಿತಾದ ಈ ಅಧ್ಯಯನಕ್ಕೆ ವಿಶ್ಲೇಷಣಾತ್ಮಕ ಅಧ್ಯಯನ ಮತ್ತು ವ್ಯಕ್ತಿ ಅಧ್ಯಯನ ವಿಧಾನವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಅವರ ಸಾಮಾಜಿಕ ಸ್ಥಿತಿಗತಿ, ಆರ್ಥಿಕ ಪರಿಸ್ಥಿತಿ, ಜೀವನಶೈಲಿಯನ್ನು ಪರಿಗನಿಸಲಾಗಿದೆ ಅಲ್ಲದೇ ಮಾಧ್ಯಮಗಳಲ್ಲಿ ಮಂಗಳಮುಖಿಯರ ಸಾಮಾಜಿಕ ಸ್ಥಿಗತಿಯನ್ನು ವ್ಯಕ್ತಪಡಿಸಿರುವ ರೀತಿಯನ್ನು ವಿವರವಾಗಿ ವಿಶ್ಲೇಷಿಸಿ ಈ ಅಧ್ಯಯನವನ್ನ ನಡೆಸಲಾಗುತ್ತದೆ. ಈ ಅಧ್ಯಯನಕ್ಕಾಗಿ ನಿರ್ದಿಷ್ಟ ಮಾಧ್ಯಮವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ ಇದರ ಮೂಲಕ ಅವುಗಳ ಒಳನೋಟಗಳನ್ನು ತಿಳಿದುಕೊಳ್ಳುವುದು ಸಾಧ್ಯವಾಗುತ್ತದೆ. ಮಾಧ್ಯಮಗಳ ವಿಷಯವನ್ನ ವಿಶ್ಲೇಷಿಸಿ ನೋಡಿದಾಗ ಸಮಾಜದಲ್ಲಿ ಮಂಗಳಮುಖಿಯರ ವಿಷಯವಾಗಿ ಮಾಧ್ಯಮಗಳು ಯಾವ ರೀತಿಯ ಪ್ರಭಾವವನ್ನ ಬದಲಾವಣೆಯನ್ನು ತಂದಿವೆ ಎಂಬುದನ್ನು ತಿಳಿಯಲು ಈ ವಿಶ್ಲೇಷಣಾ ವಿಧಾನ ಸಹಾಯಕವಾಗುತ್ತದೆ.

**ವಿಶ್ಲೇಷಣಾ ವಿಧಾನ ಮತ್ತು ವ್ಯಕ್ತಿ ಅಧ್ಯಯನ:** ಸಂಶೋಧನೆಗಾಗಿ ಗುಣಾತ್ಮಕ ವಿಶ್ಲೇಷಣಾ ವಿಧಾನವನ್ನ ಆಯ್ಕೆಮಾಡಿಕೊಳ್ಳಲಾಗಿದೆ. ಆಯ್ದುಕೊಂಡ ನಿರ್ದಿಷ್ಟ ಮಾಧ್ಯಮಗಳಲ್ಲಿ ಮಂಗಳಮುಖಿಯರನ್ನು ಹೇಗೆ ಚಿತ್ರಿಸಲಾಗಿದೆ ಅವರ ಸಾಮಾಜಿಕ ಸ್ಥಿತಿಗತಿ, ಆರ್ಥಿಕ ಬಲಿಷ್ಠತೆ, ಶೈಕ್ಷಣಿಕ ಅಭಿವೃದ್ಧಿ ಈ ವಿಷಯಗಳಿಗೆ ಸಂಬಂಧಿಸಿದಂತೆ ಮಾಧ್ಯಮಗಳು ಯಾವ ರೀತಿಯ ಜವಾಬ್ದಾರಿಯುತವಾದ ಕಾರ್ಯವನ್ನು ಮಾಡಿವೆ ಎಂಬುದನ್ನ ವಿಶ್ಲೇಷಿಸಿ ಈ ಅಧ್ಯಯನವನ್ನ ನಡೆಸಲಾಗುತ್ತದೆ ಮತ್ತು ಇದಕ್ಕೆ ಸಂಬಂಧಿಸಿದಂತೆ ವ್ಯಕ್ತಿ ಅಧ್ಯಯನವನ್ನೂ ನಡೆಸಿ ಖುದ್ದು ಮಂಗಳಮುಖಿಯರ ಅಭಿಪ್ರಾಯ ಸಂಗ್ರಹದಿಂದ ಈ ಅಧ್ಯಯನವನ್ನು ನಡೆಸಲಾಗಿದೆ.ಅಧ್ಯಯನಕ್ಕೆ ಆಯ್ದುಕೊಂಡ ಮಾಧ್ಯಮಗಳು : ದೂರದರ್ಶನ, ಪತ್ರಿಕೆಗಳು, ರೇಡಿಯೋ, ಸಿನಿಮಾಈ ನಾಲ್ಕು ಮಾಧ್ಯಮಗಳು ಮಂಗಳಮುಖಿಯರ ವಿಷಯಕ್ಕೆ ಸಂಬಂಧಿಸಿದಂತೆ ಯಾವ ರೀತಿಯ ಕಾರ್ಯಕ್ರಮಗಳ ಮೂಲಕ ಸಾಮಾಜಿಕ ಬದಲಾವಣೆಯನ್ನು ತಂದಿವೆ. ಮಂಗಳಮುಖಿಯರ ಚಿತ್ರಣ ಈ ನಾಲ್ಕು ಮಾಧ್ಯಮಗಳಲ್ಲಿ ಯಾವ ರೀತಿಯಾಗಿ ಮೂಡಿ ಬಂದಿವೆ ಹಾಗೂ ಈ ಮಾಧ್ಯಮಗಳ ಪ್ರಭಾವದಿಂದ ಮಂಗಳಮುಖಿಯರ

ಜೀವನ ಶೈಲಿಯಲ್ಲಿ, ಸಾಮಾಜಿ ಸ್ಥಿತಿಗತಿಗಳಲ್ಲಿ ಆಗಿರುವ ಬದಲಾವಣೆಗಳನ್ನು ತಿಳಿಯಲು ಈ ಅಧ್ಯಯನ ಮಹತ್ವದ್ದಾಗಿದೆ.

**ನಮೂನೆ:** ಈ ಅಧ್ಯಯನದಲ್ಲಿ ಸರಳಯಾದೃಚ್ಛಿಕ ನಮೂನೆಯನ್ನು ಅನುಸರಿಸಲಾಗಿದೆ. ಗುಣಾತ್ಮಕ ವಿಶ್ಲೇಷಣೆಗೆ ಆಯ್ದ ಮಂಗಳಮುಖಿಯರ ಅಭಿಪ್ರಾಯವನ್ನು ಹಾಗೂ ತಯಾರಿಸಿದ ಪ್ರಶ್ನಾವಳಿಗಳಿಂದ ಮಾಹಿತಿಯನ್ನೂ ಕಲೆ ಹಾಕಲಾಗಿದೆ. ಅವರ ಸಾಮಾಜಿಕ ಜೀವನ, ಸಾಮಾಜಿಕ ಸಮಸ್ಯೆಗಳು ಮತ್ತು ಉದ್ಯೋಗವಕಾಶಗಳಿಗೆ ಮಹತ್ವ ನೀಡಲಾಗಿದೆ. ವ್ಯಕ್ತಿ ಅಧ್ಯಯನ ಒಂದು ಪರಿಣಾಮಕಾರಿಯಾದ ಸಂಶೋಧನಾ ವಿಧಾನವಾಗಿರುವುದರಿಂದ ಗುಣಾತ್ಮಕ ವಿಶ್ಲೇಷಣೆಗೆ ಇದು ಸಹಕಾರಿಯಾಗಿದೆ.

**ಅಧ್ಯಯನದ ಕ್ಷೇತ್ರ:** ದಾವಣಗೆರೆ ನಗರ: ದಾವಣಗೆರೆ ನಗರವು ಕರ್ನಾಟಕದ ಹೃದಯ ಭಾಗದಲ್ಲಿದೆ. ಇದು ಜವಳಿ ಉದ್ಯಮಕ್ಕೆ ಹೆಸರುವಾಸಿಯಾದ ನಗರ. ಬಹಳ ಹಿಂದೆ ಇಲ್ಲಿಯ ಕಾಟನ್ ಮಿಲ್ ಅತ್ಯಂತ ಜನಪ್ರಿಯವಾಗಿತ್ತು. ಇಂದು ಈ ಜಿಲ್ಲೆ ಶರವೇಗದಲ್ಲಿ ಬೆಳೆಯುತ್ತಿದೆ. ಈ ಜಿಲ್ಲೆಯ ಮುಂಚಿನ ಹೆಸರು" ದವನಗಿರಿ"ಕಾಲಕ್ರಮೇಣ ಅದು ದಾವಣಗೆರೆಯಾಯಿತು.

ಇತ್ತೀಚಿನ ದಿನಗಳಲ್ಲಿ ಇದು ರಾಜ್ಯದ ಪ್ರಮುಖ ವಿದ್ಯಾಕೇಂದ್ರವಾಗಿ ಹೊರಹೊಮ್ಮುತ್ತಿದೆ. ಇಲ್ಲಿ ಚಿತ್ರಕಲೆ, ವಸ್ತ್ರ, ವಿನ್ಯಾಸ ಶಾಸ್ತ್ರ, ಎಂಜಿನಿಯರಿಂಗ್, ವೈದ್ಯಕೀಯ, ಕಲೆ, ವಾಣಿಜ್ಯ ಹಾಗೂ ಇತರ ವಿದ್ಯಾ ವಿಭಾಗಗಳನ್ನು ಹೊಂದಿರುವ ವಿದ್ಯಾಲಯಗಳನ್ನು ಹೊಂದಿರುವ ಹೆಗ್ಗಳಿಕೆ ದಾವಣಗೆರೆಯದ್ದು. ಬೇರೆ ಬೇರೆ ಕಡೆಯಿಂದ ವಿದ್ಯಾರ್ಥಿಗಳು ಇಲ್ಲಿ ವಿದ್ಯಾಭ್ಯಾಸವನ್ನು ಅರಸಿ ಬರುತ್ತಾರೆ. ದಾವಣಗೆರೆಯು ವಿಭಿನ್ನ ಜಾತಿ, ಧರ್ಮ, ಪಂಗಡಗಳನ್ನು ಹೊಂದಿದೆ. ಅನೇಕ ತರಹದ ಜನರು ಇಲ್ಲಿ ವಾಸವಿದ್ದಾರೆ. ಕೆಳವರ್ಗದವರೂ, ಮಧ್ಯಮವರ್ಗದವರೂ, ಶ್ರೀಮಂತ ವರ್ಗದವರೂ ಇಲ್ಲಿ ನೆಲೆ ನಿಂತಿದ್ದಾರೆ. ಅಂತೆಯೇ ಈ ಅಧ್ಯಯನದ ಮುಖ್ಯ ಅಂಶವಾಗಿರುವ ಮಂಗಳಮುಖಿಯರೂ ಸಹ ಇಲ್ಲಿ ನೆಲೆಸಿದ್ದಾರೆ.

ಪ್ರಮುಖವಾಗಿ ಗುಣಾತ್ಮಕ ವಿಶ್ಲೇಷಣೆಗೆ ಆಧಾರವಾಗಿರುವ ವ್ಯಕ್ತಿ ಅಧ್ಯಯನಕ್ಕೆ ದಾವಣಗೆರೆಯ ಕೆ.ಟಿ.ಜೆ. ನಗರದ ಸಿದ್ದಮ್ಮ ಉದ್ಯಾನವನದ ಬಳಿಯಿರುವ "ಅಭಯ ಸ್ಪಂದನ" ಎಂಬ ತೃತೀಯ ಲಿಂಗಿಗಳ ಅಭಿವೃದ್ಧಿ ಕಛೇರಿಯ ವ್ಯಾಪ್ತಿಗೆ ಬರುವ ಮಂಗಳಮುಖಿಯರು, ಬಾಡ ಕ್ರಾಸ್ ನ ಮನೆಯೊಂದರಲ್ಲಿ ವಾಸವಿರುವ ಮಂಗಳಮುಖಿಯರು, ಹಾಗೂ ದಾವಣಗೆರೆಯ ಹೊರವಲಯದ ಮನೆಯೊಂದರಲ್ಲಿ ವಾಸವಿರುವ ಮಂಗಳಮುಖಿಯರನ್ನು ಈ ಅಧ್ಯಯನಕ್ಕೆ ನಮೂನೆಯಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ. ಈ ಎಲ್ಲಾ ಕ್ಷೇತ್ರಗಳೂ ದಾವಣಗೆರೆಗೆ ಸೇರಿದ್ದು, ಎಲ್ಲಾ ಕ್ಷೇತ್ರಗಳಲ್ಲಿಯೂ ಇವರು ಸದರಿ ವಾಸವಿರುತ್ತಾರೆ.

**ವಿಷಯ ವಿಶ್ಲೇಷಣೆ:**

ಭಾರತದ ಸಂವಿಧಾನವು ಕಾನೂನಿನ ಸಮ್ಮುಖದಲ್ಲಿ ಎಲ್ಲ ನಾಗರೀಕರಿಗೂ ಮೂಲಭೂತ ಹಕ್ಕುಗಳನ್ನು ನೀಡಿ ಅದನ್ನು ಖಾತರಿ ಪಡಿಸಿದೆ. ಲಿಂಗದ ಆಧಾರದ ಮೇಲೆ ತಾರತಮ್ಯ ಆಗದಿರುವಂತೆ, ಸಾರ್ವಜನಿಕ ಉದ್ಯೋಗ ವ್ಯವಸ್ಥೆಯಲ್ಲಿ ಸಮಾನತೆ, ಅಭಿವ್ಯಕ್ತತೆ ಮತ್ತು ಸಂಚಾರದ ಸ್ವಾತಂತ್ರ್ಯವನ್ನು ನೀಡಿದೆ. ಆದರೆ, ವಾಸ್ತವದಲ್ಲಿ ಲಿಂಗತ್ವ ಖಚಿತ ಪಡಿಸದ ವ್ಯಕ್ತಿಗಳು ಅನೇಕ ವಿಧದ ದೌರ್ಜನ್ಯ ಮತ್ತು ಅಸಹಿಷ್ಣುತೆಯನ್ನು ಖಾಸಗಿ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಎದುರಿಸುತ್ತಿದ್ದಾರೆ.

ಕಾಲ ಎಷ್ಟೇ ಮುಂದುವರೆದರೂ ಸಮಾಜ ಮಂಗಳಮುಖಿಯರನ್ನು ನೋಡುವ ದೃಷ್ಟಿಕೋನ ಬದಲಾಗಿಲ್ಲ. ಅವರೂ ನಮ್ಮಂತೇ ಮನುಷ್ಯರು ಎಂಬ ಭಾವ ಜನರಲ್ಲಿ ಬರಲಾಗಿಲ್ಲ. ಇದಕ್ಕೆ ಶತ–ಶತಮಾನಗಳ ಸಾಕ್ಷಿಯಿದೆ. ಮನುಷ್ಯ ಚಂದ್ರಲೋಕಕ್ಕೆ ಹೋಗಿ ಬಂದರೂ ಭೂಮಿಯ ಮೇಲಿನ ಮನಸ್ಥಿತಿ ಬದಲಾಗಿಲ್ಲ. ಅವರ ಸಮಾಜಿಕ ಬದುಕು ದುರ್ಭರವಾಗಿದೆ, ಆರ್ಥಿಕ ಸಮಸ್ಯೆಗಳು ಉಲ್ಬಣವಾಗುತ್ತಿವೆ. ಈ ಅಧ್ಯಯನದಲ್ಲಿ ಈ ಎಲ್ಲಾ ಸಮಸ್ಯೆಗಳು ಮತ್ತು ಅವುಗಳಿಗೆ ಪರಿಹಾರವನ್ನು ವಿಶ್ಲೇಷಣೆ ಮಾಡಲಾಗಿದೆ.

ಈ ಅಧ್ಯಯನವು ಸರಳ ಯಾದೃಚ್ಛಿಕ ನಮೂನೆಯ ಆಧಾರದ ಮೇಲೆ ಗುಣಾತ್ಮಕ ವಿಶ್ಲೇಷಣೆಗೆ ಒಳಪಡುತ್ತದೆ. ಇಲ್ಲಿ ವ್ಯಕ್ತಿ ಅಧ್ಯಯನವು ಗುಣಾತ್ಮಕ ವಿಶ್ಲೇಷಣೆಗೆ ಮುಖ್ಯವಾದ ಹಂತವಾಗಿದೆ. ಹೀಗಾಗಿ ಮಂಗಳಮುಖಿಯರ ಸಾಮಾಜಿಕ ಜೀವನದ ಮೇಲೆ ಮಾಧ್ಯಮಗಳು ಉಂಟು ಮಾಡುತ್ತಿರುವ ಪರಿಣಾಮ ಹಾಗೂ ಮಂಗಳಮುಖಿಯರ ವೈಯಕ್ತಿಕ ಅನುಭವಗಳು ವಿಷಯ ವಿಶ್ಲೇಷಣೆಗೆ ಅವಶ್ಯಕವಾದ ಅಂಶವಾಗಿ ಕಾಣುತ್ತದೆ.

ಅಧ್ಯಯನಕ್ಕೆ ತೆಗೆದುಕೊಂಡ ಮಾಧ್ಯಮಗಳನ್ನು ನಾವು ಪರಿಗಣಿಸುವದಾದರೆ, ಅದು ಪತ್ರಿಕೆಗಳು, ನಿಯತಕಾಲಿಕೆಗಳು, ರೇಡಿಯೋ, ಟಿ.ವಿ ವರದಿಗಳು, ಸಂದರ್ಶನಗಳು, ಸಿನಿಮಾ ರಂಗ ಹಾಗೂ ಮಂಗಳಮುಖಿಯರ ವೈಯಕ್ತಿಕ ಅನುಭವಗಳು.ಮಂಗಳಮುಖಿಯರನ್ನು ಮುಖ್ಯವಾಹಿನಿಗೆ ತರುವಲ್ಲಿ ಮಾಧ್ಯಮಗಳ ಪಾತ್ರದ ವಿಶ್ಲೇಷಣೆ : ಪತ್ರಿಕೆಗಳು ಮಂಗಳಮುಖಿಯರ ಬಗ್ಗೆ ಹಲವಾರು ಲೇಖನಗಳನ್ನು ಮುದ್ರಿಸುವ ಮೂಲಕ ಜನರಲ್ಲಿ ಜಾಗೃತಿಯನ್ನು ಉಂಟುಮಾಡಲು ಹಿಂದಿನಿಂದಲೂ ಎಡಬಿಡದೆ ಪ್ರಯತ್ನಿಸುತ್ತಿವೆ. ಪತ್ರಿಕೆಗಳು ಯಾವತ್ತೂ ಜನರಲ್ಲಿ ಬದಲಾವಣೆಯನ್ನು ತಂದಿರುವುದನ್ನು ಗಮನಿಸಿದಾಗ ತೃತೀಯ ಲಿಂಗಿಗಳ ವಿಚಾರದಲ್ಲಿಯೂ ಇದರ ಪಾತ್ರ ಮಹತ್ವದ್ದೆನಿಸಿದೆ. ಈ ಅಧ್ಯಯನದಲ್ಲಿ ನಮೂದಿಸಲಾದ ಲೇಖನಗಳನ್ನೇ ನಾವು ಗಮನಿಸಿದಾಗ ಅಲ್ಲಿ ಲೈಂಗಿಕ ಅಲ್ಪಸಂಖ್ಯಾತರನ್ನು ಮುಖ್ಯವಾಹಿನಿಗೆ ತರಲು ಪ್ರಾಮಾಣಿಕ ಪ್ರಯತ್ನ ನಡೆದಿರುವುದನ್ನು ನಾವು ಕಾಣಬಹುದು.

ನಿಯತಕಾಲಿಕೆಗಳು : "ಅನನ್ಯ" ಎಂಬ ನಿಯಕಾಲಿಕೆಯು ಲೈಂಗಿತ ಅಲ್ಪಸಂಖ್ಯಾತರ ದನಿಯಾಗಿ ಹೊರಹೊಮ್ಮಿದೆ. ಇದರಲ್ಲಿ ತೃತೀಯ ಲಿಂಗದ ಪರಿಕಲ್ಪನೆ, ಸರ್ವೋಚ್ಚ ನ್ಯಾಯಾಲಯದ ತಿದ್ದುಪಡಿ ಹೀಗೆ ಮಂಗಳಮುಖಿಯರ ಬಗ್ಗೆ ಇರುವ ಹಲವಾರು ವಿಷಯಗಳನ್ನು ಜನರಿಗೆ ಮುಟ್ಟಿಸಲು ಪ್ರಯತ್ನಿಸುತ್ತಿದೆ. ಅಲ್ಲದೇ ಮಂಗಳಮುಖಿಯರ ಪ್ರತಿಭೆಗೆ ಇದು ವೇದಿಕೆಯಾಗಿ ನಿರ್ಮಾಣವಾಗಿದೆ. ಮಂಗಳಮುಖಿಯರ ಸಮಸ್ಯೆಗಳ ಜೊತೆ ಜೊತೆಗೆ ಅವರು ಬರೆದ ಲೇಖನಗಳನ್ನು, ಕವಿತೆಗಳನ್ನು ಇದರಲ್ಲಿ ಮುದ್ರಿಸಿ ಸಮಾಜಕ್ಕೆ ಅವರ ಪ್ರತಿಭಾ ಅನಾವರಣಕ್ಕೆ ಸಾಥ್ ನೀಡುತ್ತಿದೆ. ಕೇವಲ ಭಿಕ್ಷಾಟನೆ ಮತ್ತು ವೇಶ್ಯಾವಾಟಿಕೆಯೇ ಅವರ ಕೆಲಸವೆಂದು ಮೂಗುಮುರಿಯುವ ಜನರಿಗೆ ಈ ಪ್ರಯತ್ನವು ಹೊಸತರದ ಬದಲಾವಣೆಯನ್ನು ತರುತ್ತದೆ. ಅವರಲ್ಲಿಯೂ ಸಹ ಪ್ರತಿಭಾವಂತರು ಇರುತ್ತಾರೆ ಎಂಬುದಕ್ಕೆ ಈ ನಿಯತಕಾಲಿಕೆಯೇ ಸಾಕ್ಷಿ. ಅಲ್ಲದೇ ಅಂಥವರಿಗೆ ಒಂದು ಅವಕಾಶವನ್ನು ನೀಡಿದರೆ ಅವರು ಏನು ಬೇಕಾದರೂ ಮಾಡಬಹುದು ಎಂಬುದು ಇಲ್ಲಿ ಸಾಬೀತಾಗಿರುವುದನ್ನು ನಾವು ಗಮನಿಸಬೇಕು.

ಕರ್ನಾಟಕ ರಾಜ್ಯ ಟ್ರಾನ್ಸ್‌ಜೆಂಡರ್ ಪಾಲಿಸಿ, 2017 ರ ಬಗ್ಗೆ ಪ್ರಕಟವಾದ ಲೇಖನದ ವಿಶ್ಲೇಷಣೆ : ಕಾಳಜಿಗಳು, ಒತ್ತಾಯಗಳು ಮತ್ತು ಕ್ರಮ ಕೈಗೊಳ್ಳಲು ಸಲಹೆಗಳು :

ಇತ್ತೀಚೆಗೆ ಜಾರಿಗೆ ಬಂದ ಕರ್ನಾಟಕ ರಾಜ್ಯದ ಟ್ರಾನ್ಸ್‌ಜೆಂಡರ್ ಪಾಲಿಸಿಯಿಂದ ಸಮುದಾಯದವರ ನಿರೀಕ್ಷೆಗಳು ಹೆಚ್ಚಿನ

ಮಟ್ಟದಲ್ಲಿದೆ ಮತ್ತು ಈ ಪಾಲಿಸಿಯು ಕೇವಲ ಸಮುದಾಯದವರ ತುರ್ತು ಅವಶ್ಯಕತೆಗಳಿಗೆ ಮಾತ್ರ ಹೊಂದಾಣಿಕೆಯಾಗುತ್ತಿದೆ. ಈ ಕಾರಣದಿಂದಾಗಿ ಈ ಪಾಲಿಸಿಯನ್ನು ಸ್ಪಷ್ಟವಾಗಿ ಅರ್ಥೈಸಿಕೊಳ್ಳಲು ಮತ್ತು ಅವರ ಕಾಳಜಿಗಳನ್ನು ಅರಿತು ಜೊತೆಗೆ ಉತ್ತಮ ಸಂಯೋಜನೆಯನ್ನು ಖಾತರಿ ಪಡಿಸಲು ಎರಡು ದಿನಗಳ ರಾಜ್ಯಮಟ್ಟದ ಸಮಲೋಚನೆಯನ್ನು ನಡೆಸಿದಾಗ, ಈ ಸಭೆಯಲ್ಲಿ ಕರ್ನಾಟಕದ 24 ಜಿಲ್ಲೆಗಳನ್ನು ಪ್ರತಿನಿಧಿಸಿ 60ಕ್ಕೂ ಹೆಚ್ಚು ಟ್ರಾನ್ಸ್‌ಜೆಂಡರ್ ಸಮುದಾಯದ ನಾಯಕರು ಮತ್ತು 20ಕ್ಕಿಂತ ಹೆಚ್ಚು ಸಂಸ್ಥೆಗಳು ಮತ್ತು ನೆಟ್‌ವರ್ಕ್ ಗಳು ಭಾಗವಹಿಸಿದ್ದವು. ಟ್ರಾನ್ಸ್ ಸಮುದಾಯದ ವೈವಿಧ್ಯಮಯ ಸ್ವರೂಪದ ವಿವಿಧ ವಿಭಾಗಗಳ ಪ್ರತಿನಿಧಿಗಳಾದ ಹಿಜಿರಾಗಳು, ಪಂತಿ, ಸಾಟ್ಲ, ಕೋಥಿ, ಜೋಗಪ್ಪ, ಮಂಗಳಮುಖಿ, ಟ್ರಾನ್ಸ್‌ಜೆಂಡರ್ ಗಳು, ಎಫ್‌ಟುಎಂ ಸಮುದಾಯದವರು ಮತ್ತು ಇತರ ಬೆಂಬಲಿಗರು ಕಾನೂನು ತಜ್ಞರು ಹಾಗೂ ಅಧ್ಯಯನಕಾರರು ಭಾಗವಹಿಸಿದ್ದರು. ಸಾರ್ವಜನಿಕ ಚರ್ಚೆಯಲ್ಲಿ ಇತರ ಪಾಲುದಾರರಾದ ವಕೀಲರು, ಹೋರಾಟಗಾರರು, ನೀತಿ ವಿಶ್ಲೇಷಕರು, ಸರ್ಕಾರಿ ಮತ್ತು ಮಾಧ್ಯಮ ಪ್ರತಿನಿಧಿಗಳು ಭಾಗವಹಿಸಿದ್ದರು ಎಂದು ನಮೂದಿಸುವ ಈ ಲೇಖನವು ಮಂಗಳಮುಖಿಯರ ಸಂಘಟನಾ ಶಕ್ತಿಯನ್ನು ತೋರಿಸುತ್ತದೆ ಹಾಗೂ ಇತಿಹಾಸವನ್ನು ಮತ್ತು ಇವರು ಬೆಳೆದು ಬಂದ ಹಾದಿಯನ್ನು ಗಮನಿಸಿದರೆ, ಇತ್ತೀಚಿಗೆ ಇವರಲ್ಲಿ ಕಾನೂನಿನ ಅರಿವು ಮತ್ತು ತಮಗೆ ಸಿಗಬೇಕಾದ ಸೌಲಭ್ಯಗಳ ಕುರಿತು ಆಸಕ್ತಿ ಹೆಚ್ಚುತ್ತಿದೆ ಎಂದೇ ಹೇಳಬಹುದು.

ನಿಯತಕಾಲಿಕೆಯಲ್ಲಿ ಪ್ರಕಟವಾದ ಕೆಲವು ಸಮಸ್ಯೆಗಳ ವಿಶ್ಲೇಷಣೆ : ಇಲ್ಲಿನ ಸಮುದಾಯದವರು ಎದುರಿಸುತ್ತಿರುವ ಕಳಂಕ ಮತ್ತು ತಾರತಮ್ಯವನ್ನು ಗಮನದಲ್ಲಿಟ್ಟು ಪಾಲಿಸಿ ಅನುಷ್ಠಾನಕ್ಕೆ ತರಲು ಹೆಚ್ಚಿನ ಗಮನ ವಹಿಸಿ ಸಮರ್ಪಕವಾದ ಬಜೆಟ್ ಹಂಚಿಕೆಯ ಅವಶ್ಯಕತೆಯ ಕಾಳಜಿಯನ್ನು ಇವರು ವ್ಯಕ್ತಪಡಿಸುತ್ತಿದ್ದಾರೆ. ಪಾಲಿಸಿ ರಚನೆಯ ಸಂದರ್ಭದಲ್ಲಿ ರಚಿಸಲಾದ ಒಡಂಬಡಿಕೆಗಳು ಮತ್ತು ಬಂದಿದ್ದ ನಿರೀಕ್ಷೆಗಳ ಬಗ್ಗೆ ಪಾಲುದಾರರ ನಡುವೆ ಮತ್ತು ಕ್ರಿಯೆಗಳ ನಡುವೆ ಸಂಭವನೀಯ ವೇಗವನ್ನು ನಿಭಾಯಿಸಬೇಕಾಗಿರುವ ಹಿನ್ನೆಲೆಯಲ್ಲಿ ರಾಜ್ಯ ಮಟ್ಟದಲ್ಲಿ ಪ್ರತ್ಯೇಕವಾದ ಟ್ರಾನ್ಸ್‌ಜೆಂಡರ್ ಆಯೋಗ ರಚನೆಯಾಗಿ, ಪ್ರಸ್ತುತದಲ್ಲಿ ಈ ಪ್ರಯತ್ನಗಳ ಬಗ್ಗೆ ಹೆಚ್ಚಿನ ಜವಾಬ್ದಾರಿಯನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ವಹಿಸಿಕೊಳ್ಳಬೇಕೆಂದು ಮತ್ತು ಅದನ್ನು ಸಮರ್ಪಕವಾಗಿ ನಿಭಾಯಿಸಬೇಕೆಂದು ಇವರು ತಮ್ಮ ಹಕ್ಕುಗಳನ್ನು ಕೇಳಿರುವದನ್ನು ಇಲ್ಲಿ ನಾವು ಗಮನಿಸಬೇಕು. ಈ ಆಯೋಗವು ರಚನೆಯಾದಲ್ಲಿ ಸಮುದಾಯದವರ ಅವಶ್ಯಕತೆ ಕಡೆಗೆ ಹೆಚ್ಚಿನ ಗಮನ ಹರಿಸಲು ಮತ್ತು ಈ ರೀತಿಯ ಪ್ರಯತ್ನಗಳಿಗೆ ಬೆಂಬಲ ನೀಡಲು ಸಹಾಯಕವಾಗುವುದಲ್ಲದೇ ಈ ಪಾಲಿಸಿಯು ವೈವಿಧ್ಯತೆ ಹೊಂದಿರುವ ಟ್ರಾನ್ಸ್‌ಜೆಂಡರ್ ಜನಸಂಖ್ಯೆಯಲ್ಲಿ ಟ್ರಾನ್ಸ್‌ಜೆಂಡರ್ ಪುರುಷ ಮತ್ತು ಮಹಿಳೆಯರೂ ಒಳಗೊಳ್ಳುವಂತೆ ಈ ಸಮುದಾಯದವರ ಸೌಲಭ್ಯಗಳನ್ನು ಕಲ್ಪಿಸಿಕೊಡಲು ಒಂದು ಆಯೋಗ ಅಥವಾ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯವು ನಿರ್ಮಾಣವಾಗಬೇಕೆಂಬ ಉಮೇದಿಯನ್ನು ವ್ಯಕ್ತಪಡಿಸಿದ್ದಾರೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ನೋಡಲ್ ಸಂಸ್ಥೆಯಾಗಿದ್ದು, ಈ ಇಲಾಖೆಯ ಮಿತಿಯ ಅಡಿಯಲ್ಲಿ ಸಮುದಾಯಕ್ಕೆ ಸಂಬಂಧಿಸಿದ ಎಲ್ಲಾ ಯೋಜನೆಗಳು ಮತ್ತು ಸೇವೆಗಳು ಇರುವ ಕಾರಣ ಈ ಮೇಲೆ ಸೂಚಿಸಿರುವ ಬದಲಾವಣೆಯಿಂದ ಇಲಾಖೆಯು ರೂಪಿಸಿದ ಕಳೆದ ಹತ್ತು ವರ್ಷಗಳಲ್ಲಿ ಸಾಂಸ್ಥಿಕ ಮಾಹಿತಿಗಳು ನಷ್ಟವಾಗಿ ಪಾಲಿಸಿಯಲ್ಲಿ ವ್ಯಾಖ್ಯಾನಿಸಿರುವ ಆಡಳಿತಾತ್ಮಕ ರಚನೆಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರು ಜಿಲ್ಲಾ ನೋಡಲ್ ಅಧಿಕಾರಿಯಾಗಿರುತ್ತಾರೆಂದು ಸೂಚಿಸಿದೆ. ಆದರೆ, ಇಂಥಹ ಪ್ರಕ್ರಿಯೆಗಳನ್ನು ಜಿಲ್ಲಾಮಟ್ಟದಲ್ಲಿ ಜಾರಿಗೊಳಿಸಲು ಅಥವಾ ನೇತೃತ್ವ ವಹಿಸಿಕೊಳ್ಳಲು ಕನಿಷ್ಠಪಕ್ಷ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ದರ್ಜೆಯ ಅಧಿಕಾರಿಯನ್ನು ನೋಡಲ್ ಅಧಿಕಾರಿಯಾಗಿ ನೇಮಿಸಬೇಕೆಂದು ಮಂಗಳಮುಖಿಯರು ಸೂಚನೆ ನೀಡಬಯಸುತ್ತಾರೆ. ಇದರ ಮೂಲಕ ಇವರು ವ್ಯವಸ್ಥೆಯ ಸೂಕ್ಷ್ಮತೆಗಳನ್ನು ಅರ್ಥಮಾಡಿಕೊಂಡು ತಮಗೆ ಮತ್ತು ತಮ್ಮ ಪಂಗಡಕ್ಕೆ ಬೇಕಾದ ವ್ಯಕ್ತಿಯನ್ನು ಅಧಿಕಾರಿಯಾಗಿ ಆರಿಸಿಕೊಳ್ಳುವ ಸ್ವತಂತ್ರ್ಯವನ್ನು ಪಡೆಯುವಲ್ಲಿ ಬುದ್ಧಿಜೀವಿಗಳಾಗುತ್ತಿದ್ದಾರೆ ಎಂದು ಹೇಳಬಹುದು. ಹಾಗೂ ಇವರ ಇಂತಹ ಕಷ್ಟದ ಹಾದಿಯನ್ನು ಪ್ರಕಟಿಸುವುದರಿಂದ ಸಮಾಜದ ಮತ್ಯಾವುದೋ ಮೂಲೆಯಲ್ಲಿ ಇನ್ನೂ ಕತ್ತಲಲ್ಲಿ ವಾಸವಾಗಿರುವ ಮಂಗಳಮುಖಿಯರಿಗೆ ಕಾನೂನಿನ ಬಗ್ಗೆ, ಸಾಮಾಜಿಕ ವ್ಯವಸ್ಥೆಯ ಬಗ್ಗೆ ಮಾಹಿತಿ ದೊರೆಯುತ್ತದೆ ಎಂದು ಈ ಅಧ್ಯಯನವು ಹೇಳುತ್ತದೆ.

ಮೇಲ್ಕಂಡ ಪಾಲಿಸಿಯ ಅನುಷ್ಠಾನದಲ್ಲಿ ಸಮುದಾಯದ ತೊಡಗಿಸುವಿಕೆಯು ಒಂದು ನಿರ್ಣಾಯಕ ಪಾತ್ರವನ್ನು ವಹಿಸಬಹುದು ಆದ್ದರಿಂದ ಸಮುದಾಯದ ಸದಸ್ಯರ, ಸಮುದಾಯದ ನಾಯಕರ ಮತ್ತು ಸಮುದಾಯದ ಸಂಸ್ಥೆಗಳ ಪಾತ್ರಗಳನ್ನು ಸ್ಪಷ್ಟವಾಗಿ ವ್ಯಾಖ್ಯಾನಿಸುವುದು ಅತೀ ಅವಶ್ಯಕವಾಗಿದೆ. ಎಲ್ಲಾ ಸಂವೇದನೆ ಮತ್ತು ಅರಿವ ಮೂಡಿಸುವ ಸಾಹಿತ್ಯಗಳನ್ನು, ತರಬೇತಿ ಕಾರ್ಯಕ್ರಮಗಳನ್ನು ಮತ್ತು ತರಬೇತಿ ಪಠ್ಯಕ್ರಮಗಳನ್ನು ಒಂದು ಮುಕ್ತ ಮತ್ತು ಪಾರದರ್ಶಕ ಪ್ರಕ್ರಿಯೆಯ ಮುಖಾಂತರ ಸಮುದಾಯವರೊಂದಿಗೆ ಸಮಾಲೋಚನೆ ನಡೆಸಿ ನಿರ್ಧರಿಸಬೇಕೆಂದು ಈ ವರದಿಯು ವಾದಿಸುತ್ತದೆ.

ಲೈಂಗಿಕ ಅಲ್ಪಸಂಖ್ಯಾತರ ಸಮಾವೇಷಗಳ ವರದಿ ವಿಶ್ಲೇಷಣೆ : ನಮ್ಮ ಸಮಾಜದಲ್ಲಿ ಅವಕಾಶ ವಂಚಿತ ಸಮುದಾಯದಲ್ಲಿ ಒಂದಾದ ಲೈಂಗಿಕ ಅಲ್ಪಸಂಖ್ಯಾತರ ಸಮುದಾಯವು ಇತ್ತೀಚಿನ ದಿನಗಳಲ್ಲಿ ತಮ್ಮ ಹಕ್ಕುಗಳಿಗಾಗಿ ಹೋರಾಟ ನಡೆಸುತ್ತಾ ಬಂದಿದೆ. ಈ ಸಮುದಾಯವನ್ನು ತಮ್ಮ ಲಿಂಗತ್ವ ಮತ್ತು ಲೈಂಗಿಕ ಆದ್ಯತೆಯಿಂದಾಗಿ ಕಳಂಕ, ತಾರತಮ್ಯದಿಂದ ದಿನನಿತ್ಯ ಶೋಷಣೆಗೆ ಒಳಗಾಗುತ್ತಿದ್ದಾರೆ. ಈ ಸಮುದಾಯದ ಏಳಿಗೆಗಾಗಿ ಕಾರ್ಯನಿರ್ವಹಿಸಲು "ಕರ್ನಾಟಕ ಲೈಂಗಿಕ ಅಲ್ಪಸಂಖ್ಯಾತರ ವೇದಿಕೆಯು" ಏಕೈಕ ರಾಜ್ಯಮಟ್ಟದ ಹೋರಾಟದ ಸಂಘಟನೆಯಾಗಿ 25 ಜಿಲ್ಲೆಗಳಲ್ಲಿ ವೇದಿಕೆಯು ತನ್ನ ಕಾರ್ಯವ್ಯಾಪ್ತಿಯನ್ನು ಹೊಂದಿದ್ದು, ಬಡ ಲಿಂಗತ್ವ ಮತ್ತು ಲೈಂಗಿಕ ಅಲ್ಪಸಂಖ್ಯಾತರ ಹಕ್ಕುಗಳ ರಕ್ಷಣೆಗಾಗಿ ಕರ್ನಾಟಕದಾದ್ಯಂತ ಹೋರಾಟ ಮಾಡುತ್ತ ನ್ಯಾಯಾಂಗ, ಶಾಸಕಾಂಗ, ಕಾರ್ಯಾಂಗಗಳ ಜೊತೆಗೆ ತನ್ನ ಕೆಲಸವನ್ನು 2008 ರಿಂದ ಮಾಡುತ್ತಾ ಬಂದಿದೆ. ಜೊತೆಗೆ ಲಿಂಗತ್ವ ಅಲ್ಪಸಂಖ್ಯಾತರ ವಿಷಯದಲ್ಲಿ 2010 ರಿಂದ ಕರ್ನಾಟಕ ಸರ್ಕಾರದ ಆದೇಶದಂತೆ, ಸಮುದಾಯಕ್ಕೆ ಮೀಸಲಿಟ್ಟ ಸೌಲಭ್ಯಗಳನ್ನು ಅನುಷ್ಠಾನಗೊಳಿಸುವಲ್ಲಿ ಸರ್ಕಾರದ ಜೊತೆ ನಿರಂತರವಾಗಿ ಕೆಲಸ ಮಾಡಿದೆ. ಈ ಕರ್ನಾಟಕ ಲೈಂಗಿಕ ಅಲ್ಪಸಂಖ್ಯಾತರ ವೇದಿಕೆಗೆ ಕಳೆದ ದಿನಾಂಕ 29/05/2018 ರಂದು ತುಮಕೂರಿನಲ್ಲಿ ರಾಜ್ಯಮಟ್ಟದ ಲೈಂಗಿಕ ಅಲ್ಪಸಂಖ್ಯಾತರ ಸಮಾವೇಶವನ್ನು ಹಮ್ಮಿಕೊಂಡಿದ್ದು ಈ ವರದಿಯು ಇದರ ಸಂಪೂರ್ಣ ಮಹಿತಿಯನ್ನು ನೀಡುತ್ತದೆ. ಈ ಸಮಾವೇಶದ ಉದ್ದೇಶವೆಂದರೆ, ಸಮುದಾಯದ ನಾಯಕರು ಮತ್ತು ಸಮುದಾಯದ ಹೋರಾಟಗಾರರು ಉಳಿದ ಚಳುವಳಿಯವರ ಜೊತೆಗೂಡಿ ಅವರಿಗೆ ಲೈಂಗಿಕ ಅಲ್ಪಸಂಖ್ಯಾತ ಸಮುದಾಯದ ವಿಷಯಗಳನ್ನು ತಿಳಿಸುವಲ್ಲಿ

ಹಾಗೂ ಸಮುದಾಯವಾಗಿ ಬೇರೆ ಬೇರೆ ಚಳುವಳಿಗಳನ್ನು ಅರ್ಥಮಾಡಿಕೊಂಡು ಒಂದಾಗಿ ತಮ್ಮ ಹೋರಾಟವನ್ನು ಗಟ್ಟಿಗೊಳಿಸುವುದೇ ಆಗಿದೆ.

ಲೈಂಗಿಕ ಅಲ್ಪಸಂಖ್ಯಾತರಿಗೆ ಕಾನೂನು ಅರಿವು ಕಾರ್ಯಕ್ರಮದ ವಿಶ್ಲೇಷಣೆ: ಹಲವು ಸಂಘಟಿತ ಕಾರ್ಯಕ್ರಮಗಳು ತಮ್ಮದೇ ಆದ ಗುರಿ ಉದ್ದೇಶಗಳೊಂದಿಗೆ ಮಾಧ್ಯಮವಾಗಿ ಸಂವಹನದ ಭಾಗವೇ ಆಗಿಬಿಡುತ್ತವೆ. ದಾವಣಗೆರೆ ಜಿಲ್ಲೆಯಲ್ಲಿ ಜಿಲ್ಲಾಮಟ್ಟದ ಲೈಂಗಿಕ ಅಲ್ಪಸಂಖ್ಯಾತರಿಗೆ ಕಾನೂನು ಅರಿವು ಕಾರ್ಯಕ್ರಮವನ್ನು ಜಿಲ್ಲಾ ಕಾನೂನು ಸೇವಾದಳ ಪ್ರಾಧಿಕಾರ ದಾವಣಗೆರೆ ಹಾಗೂ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಕೀಲರ ಸಂಘ ಮತ್ತು ಲೈಂಗಿಕ ಅಲ್ಪಸಂಖ್ಯಾತರ ಸಂಘಟನೆಯಾದ 'ಅಭಯ – ಸ್ಪಂದನ" ಸಂಸ್ಥೆ ಇವರ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಳ್ಳಲಾದಾಗ ಕರ್ನಾಟಕ ಲೈಂಗಿಕ ಅಲ್ಪಸಂಖ್ಯಾತರನ್ನು ಅಪರಾಧ ಮುಕ್ತರನ್ನಾಗಿ ಮಾಡಿದ ಐ.ಪಿ.ಸಿ. 377 ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಕುರಿತಾಗಿ ಕಳಂಕ ಮತ್ತು ತಾರತಮ್ಯದ ಹಾಗೂ ಲಿಂಗ ಅಸಮಾನತೆ ಮತ್ತು ಸಾಮಾಜಿಕ ಅಸ್ತಿತ್ವದ ಬಗ್ಗೆ ಮಾಹಿತಿ ನೀಡುವುದರ ಮೂಲಕ ನ್ಯಾಯಾಧೀಶರ ಗಮನಕ್ಕೆ ತರಲಾಯಿತು. ರಾಜ್ಯದಲ್ಲಿ ಕರ್ನಾಟಕ ಸರ್ಕಾರ ಟ್ರಾನ್ಸ್‌ಜೆಂಡರ್ ಪಾಲಿಸಿಯನ್ನು ಕಳೆದ ಅಕ್ಟೋಬರ್ 2017 ರಂದು ಅನುಮೋದನೆ ಮಾಡಿದ್ದು ಇದುವರೆಗೂ ಯಾವುದೇ ಅನುಷ್ಠಾನ ಮಾಡುವಲ್ಲಿ ನಮ್ಮ ರಾಜ್ಯ ಸರ್ಕಾರಗಳು ವಿಫಲವಾಗಿವೆ. ಈ ವರ್ಷದ ಬಜೆಟ್‌ನಲ್ಲಿ ಯಾವುದೇ ಹಣವನ್ನು ಟ್ರಾನ್ಸ್‌ಜೆಂಡರ್ ಪಾಲಿಸಿಯ ಅನುಷ್ಠಾನಕ್ಕೆ ಮೀಸಲಿಡದೇ ಇರುವುದು ವಿಷಾದದ ಸಂಗತಿ. ಜೊತೆಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಚಿವೆಯಾಗಿದ್ದ ಜಯಮಾಲಾರವರು ಇವರ ಸಮುದಾಯದ ಕುರಿತು ಯಾವುದೇ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಿಲ್ಲ ಮತ್ತು ಸಮುದಾಯದ ಜೊತೆ ಒಂದು ಚರ್ಚೆಯನ್ನೂ ಸಹ ಮಾಡದಿರುವುದು ತುಂಬಾ ದುಃಖದ ಸಂಗತಿ. ಈ ರೀತಿಯ ಜನಪ್ರತಿನಿಧಿಗಳು ನಮ್ಮೆಲ್ಲರ ನಡುವೆ ಇರುವುದು ವಿಪರ್ಯಾಸ ಮತ್ತು ಲೈಂಗಿಕ ಕಾರ್ಯಕರ್ತರ ವಿಚಾರದಲ್ಲಿ ಅಧ್ಯಯನ ಸಮಿತಿಯಲ್ಲಿ ಇದ್ದು ಸರಿಯಾಗಿ ಅಧ್ಯಯನ ಮಾಡುತ್ತಿಲ್ಲ ಎಂಬುದನ್ನು ಈ ಲೇಖನವು ಹಲವಾರು ಮಂಗಳಮುಖಿಯರಿಗೆ ಮಾಹಿತಿ ನೀಡಿ ಈ ಮೂಲಕ ಅವರನ್ನು ಎಚ್ಚರಗೊಳಿಸುತ್ತಿದೆ.

ಸಿನಿಮಾರಂಗದಲ್ಲಿ ಮಂಗಳಮುಖಿಯರಿಗೆ ನೀಡಲಾದ ಮಹತ್ವದ ವಿಶ್ಲೇಷಣೆ: ಈ ಅಧ್ಯಯನದಲ್ಲಿ ಹಲವಾರು ಕಿರುಚಿತ್ರಗಳು ಮತ್ತು ಚಿತ್ರಗಳನ್ನು ಆಯ್ಕೆಮಾಡಿಕೊಳ್ಳಲಾಗಿದೆ. ಅದರಲ್ಲಿ ಮುಖ್ಯವಾಗಿ " ನಾನು ಅವನಲ್ಲ ಅವಳು" ಎಂಬ ಚಿತ್ರದಲ್ಲಿ ಚಿತ್ರದ ನಿರ್ದೇಶಕ ಬಿ.ಎಸ್. ಲಿಂಗದೇವರು ಮಂಗಳಮುಖಿಯರ ಜೀವನಶೈಲಿಯನ್ನು ವಿವರವಾಗಿ, ಮನಮುಟ್ಟುವಂತೆ ಚಿತ್ರಿಸಿದ್ದಾರೆ. ನಿರ್ದೇಶಕರು ತೃತೀಯಲಿಂಗಿಗಳ ಬದುಕಿನ ಬಹು ಸೂಕ್ಷ್ಮ ವಿಚಾರಗಳನ್ನು ಅರಿತು ಅವುಗಳಿಗೆ ಬಣ್ಣ ಹಚ್ಚಿದ್ದಾರೆ. ಚಿತ್ರವನ್ನು ನೋಡಿದ ಎಂಥವರಿಗೂ ಅವರ ಬದುಕಿನ ವಾಸ್ತವತೆ ಅರ್ಥವಾಗದೇ ಇರಲಾಗದು, ಅವರ ಬದುಕಿನ ಪಾಡನ್ನು ನೋಡಿ ಪ್ರೇಕ್ಷಕ ಕಣ್ಣೀರಿಡುವಲ್ಲಿ ಚಿತ್ರ ನಿರ್ದೇಶಕ ಗೆಲ್ಲುತ್ತಾನೆ.

ಇನ್ನು ಚಿತ್ರದ ಮುಖ್ಯ ಪಾತ್ರಧಾರಿ ವಿದ್ಯಾಳ ಪಾತ್ರವನ್ನು "ಸಂಚಾರಿ ವಿಜಯ್" ಮನೋಜ್ಞವಾಗಿ ಎಲ್ಲೂ ಕೃತಕ ಎನ್ನಿಸದ ರೀತಿಯಲ್ಲಿ ಅಭಿನಯಿಸಿದ್ದಾರೆ. ಅವರ ಅಮೋಘವಾದ ಅಭಿನಯದಿಂದ ಸಮಾಜವು ನಿಜಕ್ಕೂ ಕ್ಷಣದ ಮಟ್ಟಿಗಾದರೂ ಮಂಗಳಮುಖಿಯರ ಬಗ್ಗೆ ಸಹಾನುಭೂತಿ ತೋರುವ ಮನಸ್ಸು ಮಾಡಿದ್ದು ಸುಳ್ಳಲ್ಲ. ಮಂಗಳಮುಖಿಯರ ಜೀವನಶೈಲಿ, ಸಾಮಾಜಿಕ ಸಮಸ್ಯೆಗಳು, ಆರೋಗ್ಯ ಸಮಸ್ಯೆಗಳು ಅವರ ಬಡತನ, ಸಂಕಷ್ಟಗಳ ಬಗ್ಗೆ ಕಳಕಳಿಯನ್ನು ಹೊಂದಿ ಚಿತ್ರವನ್ನು ನಿರ್ಮಿಸಿದ್ದಾರೆ. ಇಂಥಹ ಚಿತ್ರಗಳು ನಿಜಕ್ಕೂ ಸಮಾಜಕ್ಕೆ ಬೇಕು. ಅವರ ಸಾಮಾಜಿಕ ಕಳಕಳಿ ಮೆಚ್ಚುವಂಥದ್ದು.ಆದರೆ, ಕಾಲಮಾನದುದ್ದಕ್ಕೂ ಮಂಗಳಮುಖಿಯರನ್ನು ಸ್ವೀಕರಿಸುವ ಅವರನ್ನು ಬೆಳೆಸುವ ಮನೋಧಾರಣೆ ಬಂದಾಗ ಮಾತ್ರ ಅವರ ಅಭಿವೃದ್ಧಿ ಸಾಧ್ಯ ಎಂದು ಹೇಳಬಹುದು.

ವ್ಯಕ್ತಿ ಅಧ್ಯಯನದ ಗುಣಾತ್ಮಕ ವಿಶ್ಲೇಷಣೆ : ಈ ಅಧ್ಯಯನದಲ್ಲಿ ಗುಣಾತ್ಮಕ ವಿಶ್ಲೇಷಣೆಗಾಗಿ ಸರಳಯಾದೃಚ್ಛಿಕ ನಮೂನೆಯನ್ನು ಆಯ್ಕೆಮಾಡಿಕೊಳ್ಳಲಾಗಿದೆ. ಮೇಲೆ ತಿಳಿಸಿದ ಕ್ಷೇತ್ರಗಳಲ್ಲಿ ಕೆಲವು ಮಂಗಳಮುಖಿಯರನ್ನು ಆಯ್ಕೆಮಾಡಿ ಅವರ ಜೀವನಶೈಲಿ, ವೈಯಕ್ತಿಕ ಜೀವನ, ಆರೋಗ್ಯ, ಸಾಮಾಜಿಕ ಜೀವನ ಮತ್ತು ಸಮಸ್ಯೆಗಳ ಬಗ್ಗೆ ಕೆಲವು ಪ್ರಶ್ನೆಗಳನ್ನು ಕೇಳಲಾಯಿತು. ಪ್ರಸ್ತುತ ದಿನಮಾನದಲ್ಲಿ ಅವರ ಬಗೆಗಿನ ಕಾನೂನುಗಳು ಹೇಗಿದ್ದಾವೆ ಮತ್ತು ಅವು ಎಷ್ಟರಮಟ್ಟಿಗೆ ಸಹಾಯಕಾರಿಯಾಗಿವೆ ಎನ್ನುವುದನ್ನು ಅವರೇ ವಿವರಿಸುತ್ತಾರೆ. ಅವರಿಗೆ ಸಿಗಬೇಕಾದ ಪಿಂಚಣಿಯ ಬಗ್ಗೆ ಅಸಮಧಾನ ವ್ಯಕ್ತಪಡಿಸುತ್ತಾರೆ. ಸರ್ಕಾರದ ಯೋಜನೆಗಳು ಕೇವಲ ಬಾಯಿಮಾತಿಗಷ್ಟೇ ವಿನಃ ಅದರಿಂದ ತಮ್ಮ ಪಂಗಡದವರಿಗೆ ಕಿಂಚಿತ್ತೂ ಉಪಯೋಗವಿಲ್ಲ ಎಂದು ಬೇಸರ ವ್ಯಕ್ತಪಡಿಸುತ್ತಾರೆ.

(ಮೂಲತಃ ಬೆಂಗಳೂರಿನವರು) ಮಂಗಳಮುಖಿ – ದೀಕ್ಷಾ ಹೇಳುವಂತೆ ಅವರು ಸುಮಾರು 7ನೇ ತರಗತಿ ಇರುವಾಗ ಅವರಲ್ಲಿ ಹೆಣ್ಣಿನ ಭಾವನೆಗಳು ಬರಲಾರಂಭಿಸಿ ಓದಿನಲ್ಲಿ ನಿರಾಸಕ್ತಿ ಮೂಡಿತಂತೆ, ನಂತರ ಅವರು ತಮ್ಮದೇ ವರ್ಗದ ಇತರ ಮಕ್ಕಳೊಂದಿಗೆ ಸರಿಯಾಗಿ ಬೆರೆಯಲು ಆಗದೇ ಮಾನಸಿಕವಾಗಿ ಕುಗ್ಗುತ್ತಾರೆ. ಮನೆಯಲ್ಲಿ ತಮ್ಮ ಈ ಬದಲಾವಣೆಯ ಬಗ್ಗೆ ಹೇಳಿದಾಗ ತಂದೆ–ತಾಯಿ ಇಬ್ಬರೂ ಅಸಮಧಾನ ವ್ಯಕ್ತಪಡಿಸಿ ದುಃಖಿತರಾಗುತ್ತಾರೆ. ಅದಾದ ಮೇಲೆ ಜನರ ಕೊಂಕು ಮಾತುಗಳನ್ನು ಕೇಳಲಾರದೇ ದೀಕ್ಷಾರವರು ಮನೆಬಿಟ್ಟು ಬಂದು ಬೇರೆ ಕಡೆ ನೆಲೆಸುತ್ತಾರೆ. ಅದಾದ ಮೇಲೆ ಮಂಗಳಮುಖಿಯರ ಸಂಘದ ಬಗ್ಗೆ ತಿಳಿದು ಅವರೊಡನೆ ಸ್ನೇಹ ಬೆಳೆಸಿ ಅವರಂತೆ ತಾವೂ ಬದುಕಲು ಆರಂಭಿಸಿದರು.

ಮಂಗಳಮುಖಿಯರಾದ ನಂದನಮ್ಮ, ಪುಷ್ಪಾ, ಪ್ರೀತಿ, ಉಮಾ ಹೀಗೆ ಈ ಐದು ಜನರು ತಮ್ಮ ವೈಯಕ್ತಿಕ ಅಭಿಪ್ರಾಯಗಳನ್ನು ಹಂಚಿಕೊಂಡಿದ್ದು ದಾವಣಗೆರೆ "ಅಭಯ – ಸ್ಪಂದನ" ಸಂಸ್ಥೆಯಲ್ಲಿ ಪ್ರಸ್ತುತ ಸದಸ್ಯರಾಗಿ ಸಂಸ್ಥೆಯ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದಾರೆ.

ವ್ಯಕ್ತಿ ಅಧ್ಯಯನದ ವಿಶ್ಲೇಷಣೆ : ಈ ಐವರು ಮಂಗಳಮುಖಿಯರು ಹೇಳುವಂತೆ ಚಿಕ್ಕ ವಯಸ್ಸಿನಲ್ಲಿಯೇ ಗಂಡಿನ ದೇಹದೊಳಗೆ ಹೆಣ್ಣಿನ ಭಾವನೆಗಳನ್ನು ಹೊಂದಿ ಅದನ್ನು ಮುಚ್ಚಿಡಲಾಗದೇ ಒಳಗೇ ಹಲವು ಗೊಂದಲಗಳಿಗೆ ಈಡಾಗಿ ಕೊನೆಯಲ್ಲಿ ಮನೆಬಿಟ್ಟು ಬರುವ ನಿರ್ಧಾರವನ್ನು ಕೈ ಗೊಳ್ಳುತ್ತಾರೆ. ಅನೇಕ ವರ್ಷಗಳ ನಂತರ ಮನೆಯ ಕುಟುಂಬದವರು ಅವರನ್ನು ಒಪ್ಪಿ ಮನೆಗೆ ಕರೆದರೂ ಇವರು ಇವರ ಸಂಸ್ಥೆ ಬಿಟ್ಟು ತಮ್ಮ ಒಡನಾಡಿಗಳನ್ನು ಬಿಟ್ಟು ಹೋಗುವುದಿಲ್ಲ. ಮನೆ ಬಿಟ್ಟು ಬಂದ ಪ್ರತಿ ಮಂಗಳಮುಖಿಯೂ ಮೊದಲು ಎದುರಾಗುವ ಸಮಸ್ಯೆಯೇ ಈ ಸಮಾಜ. ಒಂಟಿಯಾಗಿ ಬಂದ ಅವರನ್ನು ಸಮಾಜ ನೋಡುವ ದೃಷ್ಟಕೋನವೇ ಬೇರೆ. ಹಸಿವು, ಅನಾರೋಗ್ಯ, ಮಾನಸಿಕ ದುಗುಡ, ಗೊಂದಲ, ಭಯ ಇವುಗಳ ಮಧ್ಯೆ ಜನರನ್ನು ಎದುರಿಸುತ್ತಾ ನೆಲೆಗೊಳ್ಳುವುದು ಒಂದು ಸವಾಲೇ ಸರಿ. ಎಲ್ಲ ಅನುಕೂಲಗಳಿರುವ ಮನುಷ್ಯನೇ ಬದುಕಲು ಹರಸಾಹಸ ಪಡುತ್ತಿರುವಾಗ ಇವರ ಕಷ್ಟಗಳು ಹೇಳತೀರದು..!

ಮನೆಯಿಂದ ಹೊರಬಂದು ಬಸ್ ಸ್ಟ್ಯಾಂಡ್ಗಳಲ್ಲಿ, ರೇಲ್ವೇ ಸ್ಟೇಷನ್‌ಗಳಲ್ಲಿ ಅಲೆದು ತಮ್ಮ ಹೊಟ್ಟೆ ತುಂಬಿಸಿಕೊಳ್ಳಲು

ಹೆಣಗುತ್ತಾರೆ. ಚಿಕ್ಕ ವಯಸ್ಸಿನಲ್ಲಿಯೇ ಉಂಟಾದ ಮನಸಿಕ ತೊಳಲಾಟಗಳಿಂದ ಶಾಲೆಯ ಮೆಟ್ಟಿಲನ್ನು ಹತ್ತಲಾಗದೇ ವಿದ್ಯಾಭ್ಯಾಸವು ಇವರಿಂದ ದೂರವಗುತ್ತದೆ. ಅದರೆ, ಸಮಾಜ ಇದ್ಯಾವುದರ ಕಲ್ಪನೆಯಿಲ್ಲದೇ ಅವರನ್ನು ಕೇವಲ ತಿರಸ್ಕೃತ ಭಾವದಿಂದ ನೋಡುತ್ತಿರುವುದು ಶೋಷನೀಯ ಸ್ಥಿತಿ. ತಾವೂ ಉದ್ಯೋಗ ಮಾಡಿ ಸಮಾಜದಲ್ಲಿ ಗೌರವಯುತವಾಗಿ ಬದುಕಬೇಕೆಂಬ ಹಂಬಲ ಹೊಂದಿದ್ದರೂ ಅವರಿಗೆ ಉದ್ಯೋಗವಕಾಶಗಳು ಕಡಿಮೆ. ಅವರೇ ಹೇಳುವಂತೆ ಕೆಲಸ ಕೇಳಲು ಹೋದರೆ ಅವರನ್ನು ಕಳ್ಳರಂತೆ ನೋಡುವುದು, ಅನ್ಯತಾ ಭಾವಿಸುವುದು, ರೇಗಿಸುವುದು, ಚುಡಾಯಿಸುವುದು ಮಾಡುತ್ತಾರೆ. ಈ ಎಲ್ಲಾ ಕಾರಣಗಳಿಂದ ಅವರು ಭಿಕ್ಷಾಟನೆಗಳಲ್ಲಿ ತೊಡಗಿಕೊಳ್ಳುತ್ತಾರೆ. ಅವರ ಈ ಪರಿಸ್ಥಿತಿಗೆ ಕಾರಣ ನಮ್ಮ ಸಮಾಜವೇ ಆದರೂ ಅವರು ಭಿಕ್ಷಾಟಣೆಗೆ ಬಂದಾಗ ಮತ್ತೆ ಅವರನ್ನು ರೇಗಿಸುವ ಕ್ರೌರ್ಯವನ್ನು ಪ್ರದರ್ಶಿಸುತ್ತದೆ.

ದೈಹಿಕವಾಗಿ ಅಗುವಂಥಹ ಬದಲಾವಣೆಗಳನ್ನು ಅರಗಿಸಿಕೊಂಡು ಅದರೊಟ್ಟಿಗೆ ಆರೋಗ್ಯ ಸಮಸ್ಯೆಗಳನ್ನು ಅನುಭವಿಸುತ್ತಾ, ವಿನಾಕಾರಣ ಸಮಾಜದ ಕೆಂಗಣ್ಣಿಗೆ ಗುರಿಯಾಗಿ ಬದುಕುವ ಇವರ ಬದುಕು ನಿಜಕ್ಕೂ ನರಕ..! ಪ್ರಕೃತಿದತ್ತವಾಗಿ ಬಂದ ಬದಲಾವಣೆಯನ್ನು ನಮ್ಮ ಸಮಾಜ ಒಪ್ಪಿಕೊಳ್ಳದೇ ಅವರನ್ನು ದೂರವಿಟ್ಟಿರುವುದು ನಮ್ಮ ಅನಾಗರೀಕ ವರ್ತನೆಗೆ ಹಿಡಿದ ಕೈ ಗನ್ನಡಿಯಾಗಿದೆ.

ಇನ್ನು ಸರ್ಕಾರದ ಯಾವ ಯೋಜನೆಗಳೂ ಸಹ ಇವರಿಗೆ ಸಮರ್ಪಕವಾಗಿ ದೊರೆಯುತ್ತಿಲ್ಲ, ಸರ್ಕಾರದ ಸಬ್ಸಿಡಿಗಳೂ ಉಪಯೋಗವಾಗುತ್ತಿಲ್ಲ. ಚುನಾವಣಾ ಸಮಯದಲ್ಲಿ ಮಾತ್ರ ಬಂದು ಮತ ಕೇಳುವ ಅಧಿಕಾರಿಗಳಿಗೆ ನಂತರ ತಮ್ಮ ನೆನಪೂ ಇರುವುದಿಲ್ಲ ಎಂದು ಅಸಮಧಾನ ವ್ಯಕ್ತಪಡಿಸುತ್ತಾರೆ. ವಾಸವಿರಲು ಮನೆಯೂ ಸಹ ಇವರಿಗೆ ಇರುವುದಿಲ್ಲ, ಎಲ್ಲೋ ಒಂದು ಕಡೆ ಜನನಿಬಿಡ ಪ್ರದೇಶಗಳೇ ಇವರಿಗೆ ಆಸರೆ, ಸಮಾಜದ ಭಾಗವಾಗಿದ್ದುಕೊಂಡು ಸಮಾಜದಿಂದಲೇ ತಿರಸ್ಕಾರಕ್ಕೊಳಗಾದವರು ಇವರು. ಹುಟ್ಟಿನಿಂದ ಗಂಡಾಗಿ ನಂತರ ಹೆಣ್ಣಾಗಿ ಪರಿವರ್ತನೆಯಾಗುವ ಇವರು ಮಾನಸಿಕವಾಗಿ, ಸಾಮಾಜಿಕವಾಗಿ, ದೈಹಿಕವಾಗಿ ಘಾಸಿಗೊಳಗಾಗುತ್ತಾರೆ. ಸಮಾಜದ ಮನೋಭಾವ ಬದಲಾಗುವ ವರೆಗೆ ಇವರು ನೆಮ್ಮದಿಯಿಂದ ಬದುಕಲು ಅಸಾಧ್ಯ.

ದೂರದರ್ಶನದಲ್ಲಿ ಮೂಡಿಬಂದ ಮಂಗಳಮುಖಿಯರ ಸಂದರ್ಶನಗಳ ವಿಶ್ಲೇಷಣೆ : ಸ್ಟಾರ್ ವರ್ಲ್ಡ್ ಎಂಬ ಖಾಸಗೀ ವಾಹಿನಿಯೊಂದರಲ್ಲಿ ಸುಪ್ರಸಿದ್ಧ ಕಾರ್ಯಕ್ರಮ "ಸತ್ಯ ಮೇವ ಜಯತೇ" ಲ್ಲಿ ಮೂಡಿಬಂದ ಕೆಲವು ಸಂದರ್ಶನಗಳ ವಿಶ್ಲೇಷಣೆ ಇಲ್ಲಿದೆ.ಪಟಿಯಾಲಾದ ಭಜನ್ ಪ್ರತಾಪ್ ಸಿಂಗ್ ಹಾಗು ಸುಕರ್ಣ ಜೀ ರವರ ಗಝಲ್ ಎಂಬ ಮಂಗಳಮುಖಿಯು ಬಾಲ್ಯದಲ್ಲಿ ತನಗಾದ ವಿಚಿತ್ರ ಅನುಭವದಿಂದ ಮನೆಯಿಂದ ಹೊರನಡೆದು ಬಂದಾಗ ಆಕೆಯನ್ನು ಅವರ ಪೋಷಕರು ಬಿಟ್ಟುಕೊಡದೇ ಮತ್ತೆ ಮನೆಗೆ ಸೇರಿಸಿ ಅವಳ ಆಸಕ್ತಿಯ ಸಂಗೀತ ಅಭ್ಯಾಸಕ್ಕೆ ಪ್ರೋತ್ಸಾಹಿಸುತ್ತಾರೆ. ಈ ಸಂದರ್ಶನದಲ್ಲಿ ಗಝಲ್ ಳ ಕಷ್ಟ ಜೀವನ ಮತ್ತು ಅದರಿಂದ ಹೊರಬಂದ ಹಾದಿಯನ್ನು ನಿರೂಪಕ "ಆಮೀರಖಾನ್" ಹಲವು ಪ್ರಶ್ನೆಗಳ ಮೂಲಕ ಜನರ ಮುಂದಿಡಲು ಪ್ರಯತ್ನಿಸಿದ್ದಾರೆ.

ಇಲ್ಲಿ ಗಮನಿಸಬೇಕಾದ ಮುಖ್ಯ ಅಂಶವೆಂದರೆ, ಈಕೆಯ ಪೋಷಕರು ಈಕೆಯ ಪರವಾಗಿ ನಿಂತು ಅವಳ ಮಾನಸಿಕ ತೊಳಲಾಟಗಳನ್ನು ಅರಿತು ಅವಳನ್ನು ಇದ್ದ ಹಾಗೆ ಸ್ವೀಕರಿಸಿ ಆಕೆಗೆ ಲಿಂಗ ಪರಿವರ್ತನೆ ಮಾಡಿಸಿ ಎಲ್ಲಾ ಆಯಾಮಗಳಲ್ಲಿ ಬೆಂಬಲ ನೀಡುತ್ತಾರೆ. ಇದರ ಮೂಲಕ ಇಂಥಹ ಮಕ್ಕಳನ್ನು ಹೊಂದಿದ ಎಷ್ಟೋ ಪೋಷಕರಿಗೆ ಈ ಸಂದರ್ಶನವು ಒಂದು ಸಜೀವ ಭಾವವನ್ನು ತಂದುಕೊಟ್ಟಿದ್ದು ಸುಳ್ಳಲ್ಲ. ಏಕೆಂದರೆ, ಪೋಷಕರೇ ಅವರನ್ನು ಹೊರಹಾಕಿದರೆ, ಸಮಾಜ ಅವರನ್ನು ಒಪ್ಪುವುದು ದೂರದ ಮಾತು. ಹೀಗಾಗಿ ಈ ಸಂದರ್ಶನದಲ್ಲಿ ಒಬ್ಬ ಮಂಗಳಮುಖಿಯ ಪೋಷಕರು ಹೇಗೆ ಸಂದರ್ಭವನ್ನು ಎದುರಿಸಬೇಕು, ಹೇಗೆ ನೈತಿಕ ಬೆಂಬಲವನ್ನು ನೀಡಬೇಕು ಎಂದು ವಿವರಣರ ನೀಡುತ್ತದೆ. ಇಲ್ಲಿ ನಿಜವಾದ ನಾಯಕರು ಆಕೆಯ ಪೋಷಕರೇ ಎಂದರೆ ತಪ್ಪಾಗಲಾರದು. ಇಂಥಹ ಸಂದರ್ಶನಗಳು ಸಮಾಜದಲ್ಲಿ ಧನಾತ್ಮಕವಾದ ಬದಲಾವಣೆಯನ್ನು ಸಹಾಯಕಾರಿಯಾಗಿವೆ.

ಅಜ್ಮೀರದ ಒಬ್ಬ ಮಧ್ಯಮ ವರ್ಗದ ಕುಟುಂಬದಿಂದ ಬಂದಂಥಹ ದೀಪಕ್ ಎಂಬಾತನೂ ಮಂಗಳಮುಖಿಯಾಗುವ ಎಲ್ಲಾ ಲಕ್ಷಣಗಳನ್ನು ಹೊಂದಿದಾತ. ಬಾಲ್ಯದಲ್ಲಿಯೇ ಆತನು ಅನುಭವಿಸಿದ ಮಾನಸಿಕ ತೊಳಲಾಟಗಳು ಈ ಸಂದರ್ಶನದಲ್ಲಿ ಅನಾವರಣಗೊಳ್ಳುತ್ತವೆ. ಮಾನಸಿಕ ವೇದನೆಯಿಂದ ಆತ್ಮಹತ್ಯೆಗೂ ಈತ ಪ್ರಯತ್ನಿಸುತ್ತಾನೆ. ಕೊನೆಗೆ ಇಲ್ಲಿಯೂ ಸಹ ಆತನ ಪೋಷಕರು ಆತನನ್ನು ಒಪ್ಪಿಕೊಂಡು ಆತನಿಗೆ ಧೈರ್ಯ ತುಂಬುತ್ತಾರೆ. ಈ ಸಂದರ್ಶನದ ಮೂಲಕ ಸಮಾಜಕ್ಕೆ ಒಂದು ಧನಾತ್ಮಕವಾದ ಸಂದೇಶ ರವಾನೆಯಾಗುತ್ತದೆ.

ಪಬ್ಲಿಕ್ ಟಿ.ವಿ. ಯಲ್ಲಿ ಪ್ರಸಾರವಾದ ವರದಿಯೊಂದರ ವಿಶ್ಲೇಷಣೆ: ದೀಪಿಕಾ ಎಂಬ ಮಂಗಳಮುಖಿಯು ಛಲಬಿಡದೇ ತನ್ನ ಗುರಿ ಸಾಧಿಸಿದ ಸುದ್ದಿಯೊಂದನ್ನು ಪಬ್ಲಿಕ್ ಟಿ.ವಿ. ವರದಿಮಾಡಿತ್ತು. ಈಕೆ ಪೋಲಿಸ್ ಆಗಬೇಕೆಂಬ ಕನಸನ್ನು ಹೊತ್ತು ಕೆಲಸಕ್ಕಾಗಿ ಪ್ರಯತ್ನಿಸುತ್ತಿರುವಾಗ ತೃತೀಯ ಲಿಂಗಿ ಎಂಬ ಆಯ್ಕೆ ಅಪ್ಲಿಕೇಷನ್ ಲ್ಲಿ ಇಲ್ಲದ ಕಾರಣ ಪ್ರತೀ ಬಾರಿ ನಿರಾಶೆಗೊಳಗಾಗುತ್ತಿದ್ದಳು. ಆದರೆ, ಮದ್ರಾಸ್ ಕೋರ್ಟಿನ ಮೊರೆ ಹೋಗಿ ಅಂತಿಮವಾಗಿ ತೃತೀಯ ಲಿಂಗದವರೂ ಪೋಲೀಸ್ ಇಲಾಖೆಯಲ್ಲಿ ಕಾರ್ಯ ನಿರ್ವಹಿಸಲು ಸಮರ್ಥರು ಎಂಬುದನ್ನು ಸಾಧಿಸಿ ತೋರಿಸಿದ್ದಾರೆ. ಈ ವರದಿಯು ಹಲವು ಮಂಗಳಮುಖಿಯರಿಗೆ ದಾರಿದೀಪವಾಗಿದೆ. ತಮ್ಮ ದೈಹಿಕ ಹೀನತೆಯನ್ನು ಶಪಿಸುತ್ತಾ ಕೂರುವ ಬದಲು ಅದನ್ನು ಸವಾಲಾಗಿ ಸ್ವೀಕರರಿಸಿ ಬದುಕಿ ತೋರಿಸುವ ಗಟ್ಟಿತನವನ್ನು ಬೆಳೆಸಿಕೊಳ್ಳಬೇಕೆಂಬ ಉದ್ದೇಶ ಈ ವರದಿಯದಾಗಿತ್ತು. ಹೀಗೆ ಹಲವು ಕಾರ್ಯಕ್ರಮಗಳು ಮಂಗಳಮುಖಿಯರ ಜೀವನ ಸುಧಾರಣೆಯಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತಿವೆ. ಆದರೆ, ಇಂಥಹ ಕಾರ್ಯಕ್ರಮಗಳ ಸಂಖ್ಯೆ ಇನ್ನೂ ಹೆಚ್ಚಬೇಕು.

ಕೇವಲ ಚಲನಚಿತ್ರಗಳ ನಾಯಕರನ್ನು ಕರೆದು ಸಂದರ್ಶನ ಮಾಡಿ ಟಿ.ಆರ್.ಪಿ ಹೆಚ್ಚಿಸಿಕೊಳ್ಳುವ ದಿನಗಳಲ್ಲಿ ಇಂಥಹ ವಿಶೇಷ ಸಂದರ್ಶನಗಳು ಮತ್ತು ವರದಿಗಳು ನಿಜಕ್ಕೂ ಅರ್ಥಪೂರ್ಣ. ಇದರ ಮೂಲಕ ಸಾಧ್ಯವಾದಷ್ಟು ಸಮಾಜ ಮತ್ತು ಹಲವು ಮಕ್ಕಳ ಪೋಷಕರು ಬದಲಾಗುತ್ತಾರೆ. ಇಂಥಹ ಕಾರ್ಯಕ್ರಮಗಳ ಉದ್ದೇಶವೇ ಮಂಗಳಮುಖಿಯರನ್ನು ಮುಖ್ಯವಾಹಿನಿಗೆ ತರುವುದು.

ಮಂಗಳಮುಖಿ ಹಾಗೂ ಕವಯಿತ್ರಿ ಚಾಂದಿನಿಯವರ ಸಂದರ್ಶನದ ವಿಶ್ಲೇಷಣೆ:

ಒಬ್ಬ ಮಂಗಳಮುಖಿಯಾಗಿ ಚಾಂದಿನಿಯವರು ನಡೆದು ಬಂದ ಹಾದಿ ಕಲ್ಲುಮುಳ್ಳಿನಿಂದ ಕೂಡಿದ್ದು. ಅವರ ಜೀವನಗಾಥೆಯನ್ನು ಅವರು ಸಂದರ್ಶನದಲ್ಲಿ ತೆರೆದಿಡುತ್ತಾ ಸಮಾಜದ ಎಂಥಹ ವ್ಯಕ್ತಿಯೇ ಆದರೂ ಅವರೊಳಗೆ ಏನನ್ನಾದರೂ ಸಾಧಿಸಬೇಕೆಂಬ ಛಲವಿದ್ದರೆ ಯಾವ ದೈಹಿಕ ಬಲಹೀನತೆಯೂ ಅಡ್ಡಿಯಾಗಲಾರದು ಎಂದು ಸ್ಫೂರ್ತಿದಾಯಕವಾಗಿ ಮಾತನಾಡಿರುವುದು ಇಲ್ಲಿನ ವಿಶೇಷ. ಕವಿತೆಯೆಡಗಿನ ಅವರ ನಿಲುವ, ಭಾವ ಮತ್ತು ಕವಿತೆಗಳ ಮೂಲಕ ಸಮಾಜವನ್ನು ಬದಲಾಯಿಸುವ ಮನೋಧೋರಣೆ

ಮೆಚ್ಚುವಂಥದ್ದು. ಇಂಥಹ ಸಂದರ್ಶನಗಳಿಂದ ಸಹಜವಾಗಿಯೇ ಮಂಗಳಮುಖಿಯರಿಗೆ ಧೈರ್ಯ ಬರುತ್ತದೆ, ತಾವು ಅವರಂತೆ ವಿಶಿಷ್ಟ ವ್ಯಕ್ತಿಗಳಾಗಲು ಸಾಧ್ಯ ಎಂಬ ಹುಮ್ಮಸ್ಸು ಮೂಡುತ್ತದೆ.ಹೀಗೆ ಸಂದರ್ಶನಗಳು ಸಮಾಜದ ಮೇಲೆ, ಖುದ್ದು ಮಂಗಳಮುಖಿಯರ ಮೇಲೆ ಧನಾತ್ಮಕವಾದ ಪರಿಣಾಮವನ್ನು ಉಂಟುಮಾಡಲು ಶ್ರಮಿಸುತ್ತಿವೆ.

ಸಂವಹನದ ಮಾಧ್ಯಮವಾದ ಪುಸ್ತಕಗಳು ಮಂಗಳಮುಖಿಯರ ಬಗ್ಗೆ ತೋರುವ ಕಾಳಜಿಯ ವಿಶ್ಲೇಷಣೆ : ಸರಸ್ವತಿ ಯವರು ಅನುವಾದಿಸಿರುವ "ಬದುಕು-ಬಯಲು" ಎಂಬ ಪುಸ್ತಕವು ದೊರೈಸ್ವಾಮಿ ಎಂಬ ಗಂಡು ರೇವತಿಯಾಗುವ ಜೀವನಯಾನವನ್ನು ನೈಜವಾಗಿ ಅಕ್ಷರ ರೂಪಕ್ಕೆ ತಂದಿದ್ದಾರೆ. ಮೂಲತಃ ರೇವತಿಯವರು ಬರೆದಿರುವ ಈ ಪುಸ್ತಕದಲ್ಲಿ ಪ್ರತಿಯೊಬ್ಬ ಮಂಗಳಮುಖಿಯೂ ಓದಬೇಕಾದ ಪುಟಗಳಿವೆ. ಸಮಾಜದಲ್ಲಿ ನಿರ್ಲಕ್ಷ್ಯಕ್ಕೊಳಗಾದ ಪಂಗಡದವರಾಗಿ ಆ ಮಾನಸಿಕ ದ್ವಂದ್ವಗಳ ಮಧ್ಯೆ ಎಲ್ಲವನ್ನು ಮರೆತು ತನ್ನ ಜೀವನದ ಪಯಣವನ್ನು ಪುಸ್ತಕಕ್ಕೆ ಇಳಿಸುವ ಸಾಹಸಕ್ಕೆ ಕೈ ಹಾಕಿರುವುದು ಉಳಿದ ಮಂಗಳಮುಖಿಯರಿಗೆ ಆದರ್ಶವೇ ಸರಿ. ಚಿಕ್ಕ ಹಳ್ಳಿಯಲ್ಲಿ ಜನಿಸಿ ಮಂಗಳಮುಖಿಯರ ಹಕ್ಕೊತ್ತಾಯಗಳವರೆಗೆ ತಾವು ಬೆಳೆದು ಬಂದ ಹಾದಿಯನ್ನು ರೇವತಿ ಮನೋಜ್ಞವಾಗಿ ಚಿತ್ರಿಸಿದ್ದಾರೆ. ಈ ಅಧ್ಯಯನದಲ್ಲಿ ನಾವು ಒಂದು ಪುಸ್ತಕವು ಹೇಗೆ ಸಂವಹನದ ಜವಬ್ದಾರಿಯನ್ನು ಹೊರಲು ಸಾಧ್ಯ ಎಮಬುದನ್ನು ಕಾಣಬಹುದು. ಏಕೆಂದರೆ, ಯಾವುದೋ ಹಳ್ಳಿಯಲ್ಲಿ ಇದ್ದ ಈಕೆ ಇಂದು ಸಮಾಜದ ಮುಖ್ಯವಾಹಿನಿಗೆ ಬರಲು ಕಾರಣ ಪುಸ್ತಕ. ಸರಸ್ವತಿ ಅವರು ಅನುವಾದಿಸಿದ ಪುಸ್ತಕವನ್ನು ಓದಿದ ಜನ ಇವರನ್ನು ಗುರುತಿಸಲು ಆರಂಭಿಸಿದರು. ಹೀಗೆ ಒಂದು ಪುಸ್ತಕವು ಸಂವಹನದ ಭಾಗವಾಗಿ ತೃತೀಯ ಲಿಂಗಿಗಳನ್ನು ಬೆಳಕಿಗೆ ತರಲು ಪರಿಶ್ರಮಿಸುತ್ತಿವೆ.

**ಫಲಿತಾಂಶಗಳು :**

- ಮಂಗಳಮುಖಿಯರ ಸಾಮಾಜಿಕ ಅಭಿವೃದ್ಧಿಯಲ್ಲಿ ಮಾಧ್ಯಮಗಳ ಪಾತ್ರ ಎಂದಾಗ ಇಲ್ಲಿ ಮಾಧ್ಯಮ ಎಂದರೆ ಪತ್ರಿಕೆ, ನಿಯತಕಾಲಿಕೆ, ಟಿ.ವಿ., ರೇಡಿಯೋ, ಸಿನಿಮಾರಂಗ ವನ್ನು ಆಯ್ಕೆಮಾಡಲಾಗಿದೆ.
- ಪತ್ರಿಕೆ ಮತ್ತು ನಿಯತಕಾಲಿಕೆಗಳ ಮೂಲಕ ತೃತೀಯ ಲಿಂಗಿಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವ ಮತ್ತು ಅವರ ವಾಸ್ತವ ಬದುಕನ್ನು ಜನರಿಗೆ ತಿಳಿಸುವ ಪ್ರಯತ್ನ ನಡೆಯುತ್ತಿದೆ ಎಂಬುದು ತಿಳಿದು ಬರುತ್ತದೆ.
- ದೂರದರ್ಶನದಲ್ಲಿ ಅಷ್ಟೇನು ಹೆಚ್ಚಾಗಿ ಮಂಗಳಮುಖಿಯರ ಬಗ್ಗೆ ವಿಶೇಷವಾದ ಕಾಳಜಿ ವ್ಯಕ್ತವಾಗುತ್ತಿಲ್ಲ ಎಂಬ ಅಂಶವನ್ನು ಈ ಅಧ್ಯಯನ ತಿಳಿಸುತ್ತದೆ.
- ರೇಡಿಯೋಗಳಲ್ಲಿ ಆಗಾಗ ಮಾತ್ರ ತೃತೀಯ ಲಿಂಗಿಯರ ಬಗೆಗಿನ ಕಾರ್ಯಕ್ರಮಗಳು, ಸಂದರ್ಶನಗಳು ನಡೆಯುವುದನ್ನು ಗಮನಿಸಬಹುದು.
- ಪುಸ್ತಕಗಳನ್ನು ಪರಿಗಣಿಸಿದಾಗ ಮಂಗಳಮುಖಿಯರ ಜೀವನ ಚರಿತ್ರೆಗಳು ಬಂದಿವೆ. ಈ ಮೂಲಕ ಅವರ ಕಲಾಭಿವೃದ್ಧಿಯು ಹೆಚ್ಚುತ್ತಿದೆ ಎಂದು ಈ ಅಧ್ಯಯನದಲ್ಲಿ ತಿಳಿಯುತ್ತದೆ.
- ಮಂಗಳಮುಖಿಯರ ಬಗ್ಗೆ ಟಿ.ವಿ ಸಂದರ್ಶನಗಳು ನಡೆದರೂ ಎಲ್ಲಾ ಭಾಷೆಗಳಲ್ಲಿ ಅವು ಪ್ರಸಾರವಾಗುವುದಿಲ್ಲ.
- ಸಿನಿಮಾರಂಗವೂ ಸಹ ವಿಶೇಷ ಕಾಳಜಿಯನ್ನು ಮಂಗಳಮುಖಿಯರ ಬಗ್ಗೆ ಇಟ್ಟುಕೊಂಡಿಲ್ಲ ಎಂದೇ ಹೇಳಬಹುದು.

- ಶಿಫಾರಸ್ಸುಗಳು/ಸಲಹೆಗಳು :
- ಮುದ್ರಣ ಮಾಧ್ಯಮವು ನಿರಂತರವಾಗಿ ಇವರ ಬಗ್ಗೆ ಮಾಹಿತಿಯನ್ನು ಜನರಿಗೆ ತಲುಪಿಸಬೇಕು
- ಸಿನಿಮಾ ರಂಗ ಒಂದು ಪ್ರಭಾವಶಾಲಿ ಕ್ಷೇತ್ರವಾಗಿರುವುದರಿಂದ ಇನ್ನೂ ಹೆಚ್ಚಿನ ಚಿತ್ರಗಳು ಇವರ ಜೀವನದ ಬಗ್ಗೆ ಬೆಳಕು ಚೆಲ್ಲಬೇಕು.
- ಮಂಗಳಮುಖಿಯರ ಆರೋಗ್ಯದ ಬಗ್ಗೆ ಸರ್ಕಾರ ಗಮನಹರಿಸಬೇಕೆಂದು ಮಾಧ್ಯಮಗಳು ಒತ್ತಾಯಿಸಬೇಕು.
- ಇವರಿಗೆ ಹೆಚ್ಚೆಚ್ಚು ಉದ್ಯೋಗಾವಕಾಶಗಳು ಸಿಗಲು ಇವರ ಎಲ್ಲಾ ಹೋರಾಟಗಳಿಗೆ ಮಾಧ್ಯಮ ಸಾಥ್ ನೀಡಬೇಕು.
- ಮಂಗಳಮುಖಿಯರ ಮದುವೆ, ಅವರ ಅಂತ್ಯಸಂಸ್ಕಾರ ಹೀಗೆ ಕೌಟುಂಬಿಕ ವಿಕಾರ್ಯ, ಶಾಸ್ತ್ರದ ಬಗ್ಗೆ ಮುಂದೆ ಅಧ್ಯಯನ ನಡೆಸಬಹುದು.

**ಉಪಸಂಹಾರ:**

ತಮ್ಮದಲ್ಲದ ತಪ್ಪಿಗೆ ಇಡೀ ಜೀವನವನ್ನೇ ನರಕದಂತ ಸಮಾಜದಲ್ಲಿ ಕಳೆಯಬೇಕಾದಂಥ ಪರಿಸ್ಥಿತಿ ಮಂಗಳಮುಖಿಯರಿಗೆ ಬಂದಿರುವುದು ವಿಪರ್ಯಾಸ. ತಮ್ಮಂತೇ ಮನುಷ್ಯ ದೇಹ, ಕಾಲು ಕೈ ಹೊಂದಿದ ಆದರೆ ಕೇವಲ ಮಾನಸಿಕವಾಗಿ ಬೇರೆ ರೂಪವನ್ನು ಬಯಸುವ ಇನ್ನೊಬ್ಬ ವ್ಯಕ್ತಿಯನ್ನು ಹೀನಾಯವಾಗಿ ನಡೆಸಿಕೊಳ್ಳುವ ಸಮಾಜದಲ್ಲಿ ನಾವಿರುವುದು ಖೇದನೀಯ.

ಮನುಷ್ಯ ಎಷ್ಟೇ ತಾಂತ್ರಿಕವಾಗಿ ಮುಂದವರೆದರೂ ಅವನಿನ್ನು ಮನುಷ್ಯತ್ವವನ್ನು ಪಡೆದಿಲ್ಲ,ಜಾತಿ ಪದ್ಧತಿ,ಧರ್ಮ,ಕೋಮುವಾದ ಗಳಂಥ ಹೀನ ವ್ಯವಸ್ಥೆಯೊಳಗೆ ಬದುಕುತ್ತಿರುವ ನಾವು ಯಾಂತ್ರಿಕವಾಗಿ ಜೀವನ ನಡೆಸುತ್ತಿದ್ದೇವೆ. ಇವರು ಎಲ್ಲರಂತೆ ಸ್ವಚ್ಛಂದವಾಗಿ ಜೀವನ ನಡೆಸಬಯಸಿದರೂ ಸಮಾಜ ಬಿಡುವುದಿಲ್ಲ. ಅವರನ್ನು ರೇಗಿಸುತ್ತಾ, ಕಾಲೆಳೆಯುತ್ತಾ ನಗುತ್ತದೆ. ಇಂಥಹ ಪರಿಸ್ಥಿತಿಯಲ್ಲಿ ಅವರ ಬದುಕು ಗಾಳಿಗಿಟ್ಟ ದೀಪ.ಇನ್ನು ಈ ಅಧ್ಯಯನದಲ್ಲೇ ನಾವು ಕಾಣಬಹುದಾದ ಅವರ ಅವಿರತ ಹೋರಾಟದ ಬದುಕು ಎಂಥಹವರಿಗೂ ನೋವನ್ನುಂಟು ಮಾಡುತ್ತದೆ.

ಸ್ವಾವಲಂಬಿಗಳಾಗಿ ಬದುಕಲು ಸಾಧ್ಯವಾಗದಿದ್ದಾಗ ಮನುಷ್ಯನು ಕುಗ್ಗುತ್ತಾನೆ, ನಿರುತ್ಸಾಹಿಯಾಗುತ್ತಾನೆ, ಮಾನಸಿಕವಾಗಿ ಅಧಃಪತನಕ್ಕಿಳಿಯುತ್ತಾನೆ, ಹೀಗೆ ವಿನಾಕಾರಣದಿಂದ ತಿರಸ್ಕಾರಕ್ಕೊಳಗಾದಾಗ ಬದುಕು ಯಾತನಾದಾಯಕವಾಗುತ್ತದೆ. ಒಂದು ಕಡೆ ಪೋಷಕರಿಂದ ದೂರವಾಗಿ, ತಮ್ಮ ದೈಹಿಕ ಸಮಸ್ಯೆಗಳಿಂದ ಹೈರಾಣಾಗಿ, ಹಣಕ್ಕಾಗಿ ಪೇಚಾಡುವ ಇವರ ಜೀವನ ನರಕ ಸದೃಶ ಎಂಬುದು ಈ ಅಧ್ಯಯನದಿಂದ ತಿಳಿದುಬರುತ್ತದೆ.

ಕೆಲಸ ಮಾಡುವ ಆಸಕ್ತಿಯಿದ್ದರೂ ಇವರಿಗೆ ಕೆಲಸ ನೀಡುವ ಉದಾರ ಮನೋಭಾವ ನಮ್ಮ ಸಮಾಜಕ್ಕಿನ್ನು ಬಂದಿಲ್ಲ. ಇವರನ್ನು ಕಳ್ಳರ ತರಹ ನೋಡುತ್ತಾ, ನಿಕೃಷ್ಟವಾಗಿ ಕಾಣುವ ಜನರೇ ಇದ್ದಾರೆ. ಇಂಥಹ ಸಂದರ್ಭದಲ್ಲಿ ಇವರು ತಮ್ಮದೇ ಆದ ಗುಂಪನ್ನು ಮಾಡಿಕೊಂಡು ಒಬ್ಬರಿಗೊಬ್ಬರು ಸಾಂತ್ವನ ಹೇಳಿಕೊಳ್ಳುತ್ತಾರೆ. ತಮಗಾಗಿ ಇರುವಂಥ ಸಂಘ ಸಂಸ್ಥೆಗಳನ್ನು ಸೇರಿ ಆ ಮೂಲಕ ಒಂದು ಸಾಮಾಜಿಕ ಬದುಕನ್ನು ಆರಂಭಿಸುತ್ತಿರುವುದು ಖುಷಿಯ ವಿಚಾರ.

ಈ ಸಂಸ್ಥೆಗಳ ಮೂಲಕ ಹಲವರು ಹೋರಾಟಗಳನ್ನು ಮಾಡುತ್ತಾ, ತಮ್ಮ ಹಕ್ಕುಗಳನ್ನು ಪಡೆಯಲು ಮುಂದಾಗುತ್ತಿದ್ದಾರೆ. ಆದರೂ ಸರ್ಕಾರ ಇವರ ಬಗ್ಗೆ ತೋರುವ ಆಸಕ್ತಿ,ಕಾಳಜಿ ಕಡಿಮೆಯೇ,

ಇವರ ದೈನಂದಿನ ಬದುಕನ್ನು ನಡೆಸಲೂ ಸಹ ಇವರಿಗೆ ವರಮಾನ ಇರುವುದಿಲ್ಲ, ಸರ್ಕಾರ ಈ ಬಗ್ಗೆ ಗಮನ ಹರಿಸಬೇಕು. ಇವರಿಗೆ ಕೊಡಮಾಡಲಾದ ಮೈತ್ರಿ ಯೋಜನೆಯಲ್ಲಿ 40ಕ್ಕಿಂತ ಕಡಿಮೆ ವಯಸ್ಸಿನವರಿಗೆ ಪಿಂಚಣಿಯನ್ನು ನಿಲ್ಲಿಸಿ 18 ರಿಂದ 40 ವಯಸ್ಸಿನವರಿಗೆ ಉದ್ಯೋಗವನ್ನು ನೀಡಬೇಕು ಅಲ್ಲದೇ ಪಿಂಚಣಿಯನ್ನು ನೀಡಬಾರದು. ಏಕೆಂದರೆ, ಪಿಂಚಣಿ ನೀಡಿದರೆ ಅವರು ಉದ್ಯೋಗ ಬೆಂಬಲಕ್ಕೆ ಅನರ್ಹರಾಗುತ್ತಾರೆ. ಜೊತೆಗೆ 40 ರಿಂದ 60 ವಯಸ್ಸಿನವರಿಗೆ ಪಿಂಚಣಿಯ ಮೊತ್ತವನ್ನು ಮಾಸಿಕವಾಗಿ 5000 ಕ್ಕೆ ಹೆಚ್ಚಿಸಬೇಕು. 60 ವರ್ಷದ ವಯಸ್ಸಿಗೂ ಮೇಲ್ಪಟ್ಟವರಿಗೆ ಪಿಂಚಣಿಯ ಮೊತ್ತವನ್ನು 10000 ರೂಗಳಿಗೆ ಹೆಚ್ಚಿಸಬೇಕು. ಸರ್ಕಾರವು ನೀಡುವ ಮಾಸಿಕ ಪಿಂಚಣಿ 600 ರೂ ಈಗಿನ ಕಾಲಕ್ಕೆ ಯಾವ ಸಹಾಯಕ್ಕೂ ಬರುವುದಿಲ್ಲ. ಆದರೂ ಸರ್ಕಾರ ಇವರ ಬಗ್ಗೆ ಅನಾಸಕ್ತಿ ತೋರುತ್ತಿರುವುದು ಖೇದದ ಸಂಗತಿ.

ಸರ್ಕಾರ ಇವರ ಸಮಸ್ಯೆಗಳನ್ನು ಗಂಭೀರವಾಗಿ ಪರಿಗಣಿಸಿ ಇವರ ದೈನಂದಿನ ಜೀವನ ಸಾಗಿಸಲು ಹಾಗೂ ಭವಿಷ್ಯದ ಭದ್ರತೆಗಾಗಿ ಸವಲತ್ತುಗಳನ್ನು ಮಾಡಿಕೊಡಬೇಕು. ಇಲ್ಲವೇ ಇವರಿಗೆ ಹೆಚ್ಚು ಉದ್ಯೋಗವಕಾಶಗಳನ್ನು ಸೃಷ್ಟಿಸಿಕೊಡಬೇಕು. ಭಾರತವು ಪ್ರಜಾಸತ್ತಾತ್ಮಕ ರಾಷ್ಟ್ರ. ಇಲ್ಲಿ ಎಲ್ಲರೂ ಸಮಾನರು. ಲಿಂಗ,ಧರ್ಮ,ಭಾಷೆಗಳ ಆಧಾರದ ಮೇಲೆ ಸಮಾನತೆ ತೋರುವುದು ಎಷ್ಟು ಅಪರಾಧವೋ ಹಾಗೆಯೇ ಇವರ ದೈಹಿಕ ವಿಭಿನ್ನತೆಯ ಕಾರಣದಿಂದ ತಿರಸ್ಕಾರ ಮನೋಭಾವದಿಂದ ನೋಡುವುದೂ ಅಪರಾಧವೇ ಸರಿ.. ಇವರ ಜೀವನಕ್ಕೆ ಭದ್ರತೆ ಒದಗಿಸಿ ಇವರನ್ನು ಭಿಕ್ಷಾಟನೆಯಿಂದ ಮುಕ್ತಿಗೊಳಿಸಬೇಕು. ಇದಕ್ಕೆ ಪೂರಕವಾಗಿ ಮಧ್ಯಮಗಳು ಇನ್ನೂ ಹೆಚ್ಚೆಚ್ಚು ಸಕ್ರಿಯವಾಗಿ ಪಾಲ್ಗೊಂಡು ಇವರಿಗೆ ನೈತಿಕ ಬೆಂಬಲವನ್ನು ನೀಡಬೇಕಾಗಿದೆ.

**ಆಧಾರ ಗ್ರಂಥಗಳು:**


1. ನಾಗಾರ್ಜುನ ಡಾ.ಹಾ.ಮ, (2013) ಸಮೂಹ ಮಾಧ್ಯಮ ಅಂದು ಇಂದು, ಸೃಷ್ಟಿ ಪ್ರಕಾಶನ, ಬೆಂಗಳೂರು
2. ನವಿಲೂರ್ ತೇಜಸ್ವಿನಿ, (2007) ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ, ಕೆ.ಆರ್. ಸುಂದರ್ ಪ್ರಕಾಶನ, ಮೈಸೂರು,
3. ಪದ್ಮನಾಭ ಎನ್ ಕೆ, (2011) ಮಾಧ್ಯಮ ಮಂಥನ, ರಾಘವೇಂದ್ರ ಪ್ರಿಂಟರ್ಸ್, ಹಾಸನ.
4. ರಾವ್ ರಂಗನಾಥ್.ಜಿ.ಎನ್. (ಜುಲೈ–2005) ಪತಿಕೋಧ್ಯಮ ಭಾಗ–1, ಕಾಮಧೇನು ಪ್ರಕಾಶನ, ಬೆಂಗಳೂರು.
5. ಶೇಖರ್ ಚಂದ್ರ.ಬಿ.ಎಸ್. (2003) ಸಂವಹನ ಮಾಧ್ಯಮಗಳು, ಹಂಪಿ ಪ್ರಕಾಶನ, ಬೆಂಗಳೂರು,
6. ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗ, ಕರ್ನಾಟಕ ರಾಜ್ಯ ಮುಕ್ತ ವಿವಿ, ಮೈಸೂರು–570006